ಶ್ರೀ ರಾಮಚಂದ್ರ ಮಿಷನ್®

ಆಂತರಿಕ ಪ್ರಸಾರಕ್ಕಾಗಿ ಮಾತ್ರ

ECHOES INDIA

ನವಂಬರ್ 2013 ಸಂಪುಟ 6 ಸಂಚಿಕೆ 6








## ಮಿನ್ಸ್ಕ ಆಶ್ರಮದ ಉದ್ಘಾಟನೆ, ಬೆಲಾರುಸ್

ಸೆಪ್ಟೆಂಬರ್ 1, ರವಿವಾರದಂದು ಗುರುಗಳು ಎಂದಿನಂತೆ ಗೀತಾ ಪ್ರವಚನವನ್ನು ಆಲಿಸಿದರು. ತದನಂತರ ಅವರು ಕಚೇರಿಗೆ ಬಂದರು ಮತ್ತು ಮಣಪಾಕ್ಕಂನಲ್ಲಿರುವ ಎಲ್ಲ ರಶ್ಯಾ ಅಭ್ಯಾಸಿಗಳು ಮತ್ತು LMOIS ನಲ್ಲಿ ಕಲಿಯುತ್ತಿರುವ ರಶ್ಯಾದಿಂದ ಬಂದ ವಿದ್ಯಾರ್ಥಿಗಳೆಲ್ಲರೂ ಈ ಮಹತ್ವದ ಘಟನೆಯಲ್ಲಿ ಭಾಗಿಗಳಾಗಿರಲು ಒಳಗಿರುವುದನ್ನು ದೃಢಪಡಿಸಿಕೊಂಡರು. ಅವರು ಮಿನ್ಸ್ಕನಲ್ಲಿದ್ದ ಅಭ್ಯಾಸಿಗಳೊಡನೆ ವೀಡಿಯೋ ಸಂಪರ್ಕದ ಮೂಲಕ ಮಾತನಾಡಿದರು, “ನಮಗೆ, ಇದು ರಶ್ಯಾ ಆಶ್ರಮವಾಗಿದೆ ಮತ್ತು ಇನ್ನೂ ಹೆಚ್ಚು ಆಶ್ರಮಗಳು ಉದಯಿಸಲಿವೆ.” ಎಂದರು. ತನಗೆ ಸ್ಲಾವೊವಿಕ್ ಜನರೊಡನೆ ಸುದೀರ್ಘ ಸಾಹಚರ್ಯವಿತ್ತೆಂದೂ, ಅದು ಬಹುಶಃ ಹಿಂದಿನ ಜನ್ಮಗಳಿಂದಲೂ ಇದ್ದಿರಬಹುದೆಂದು ಅವರು ಸೇರಿಸಿದರು. ರಶ್ಯಾವನ್ನು ಸಂದರ್ಶಿಸಿ, ಅವರೆಲ್ಲರನ್ನೂ ಇನ್ನೊಮ್ಮೆ ನೋಡುವ ತನ್ನ ಆಶಯವನ್ನು ಅವರು ವ್ಯಕ್ತಪಡಿಸುತ್ತ, “ಏಕೆಂದರೆ, ನಾನು ಮತ್ತೆ ಹೇಳುತ್ತೇನೆ, ನಿಮ್ಮನ್ನು ಮತ್ತೆ ಮತ್ತೆ ನೋಡಲು ನಾನು ಬಹಳ ಇಷ್ಟಪಡುತ್ತೇನೆ.” ಎಂದರು. ರಶ್ಯಾದಿಂದ ಬಂದ ಆರು ಮಕ್ಕಳು ಒಮೆಗಾ ಶಾಲೆಯಲ್ಲಿ ಕಲಿಯುತ್ತಿರುವುದನ್ನು ಗುರುಗಳು ಹೇಳಿ, “ಇನ್ನಷ್ಟು ಹೆಚ್ಚು ಹೆಚ್ಚು ಮಂದಿ ಬರುವರೆಂದು ಹಾರೈಸುತ್ತೇನೆ” ಎಂದರು. ಮಾತನಾಡಿದ ಮೇಲೆ ಅವರು ಸತ್ಸಂಗವನ್ನು ನಡೆಸಿಕೊಟ್ಟರು. ತದನಂತರ ಗುರುಗಳು ಪ್ರಸಾದವನ್ನು ಅರ್ಪಿಸಿ, ರಶ್ಯಾ-ಭಾಷಿಗ ಅಭ್ಯಾಸಿಗಳೆಲ್ಲರಿಗೂ ಅದನ್ನು ಹಂಚಿದರು.

ಗುರುಗಳ ಆರೋಗ್ಯ ಇನ್ನಷ್ಟು ಉತ್ತಮವಾಗುತ್ತಿದೆ. ಒಂದು ದಿನ ಅವರು ವಾಕರನ್ನು ಬಳಸಿ ಕುಟೀರದ ಹೊರಗೆ ಬಂದು ಅಲ್ಲಿ ಕುಳಿತುಕೊಂಡರು. ಸುದೀರ್ಘ ಕಾಲದ ನಂತರ ಗುರುಗಳು ನಡೆಯಲು ಮತ್ತು ಹೊರಗೆ ಬರಲು ಶಕ್ತರಾಗಿದ್ದಾರೆ.

ಗುರುಗಳು ಇತಿಹಾಸದ ತಂಡಕ್ಕೆ ತುಂಬ ಸಮಯ ಮತ್ತು ಗಮನವನ್ನು ಕೊಡುತ್ತಿದ್ದಾರೆ. ಅವರು ತಂಡಕ್ಕೆ ಹೇಳಿದರು, “ಬನ್ನಿ, ಸಹಜಮಾರ್ಗ ಇತಿಹಾಸದ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಸಾಧ್ಯವಿದ್ದಷ್ಟು ಉತ್ತರಿಸುತ್ತೇನೆ.” ಆದ್ದರಿಂದ ಪ್ರತಿದಿನ ಬೆಳಿಗ್ಗೆ, ಈ ತಂಡವು ಕುಟೀರಕ್ಕೆ ಬರುವುದು. 9.00 ಗಂಟೆಯ ಸುಮಾರಿಗೆ ಗುರುಗಳು ಸಿದ್ಧರಾಗುವರು. ಅವರು ಒಂದು ಬೈಠಕ್ ಕೊಡುವರು ಮತ್ತು ನಂತರ ಪ್ರಶ್ನೋತ್ತರ ಅವಧಿ ಆರಂಭವಾಗಿ ಸುಮಾರು ಒಂದು ಗಂಟೆಗಿಂತ ಹೆಚ್ಚುಕಾಲ ನಡೆಯುವುದು. ಗುರುಗಳು ಈ ಚರ್ಚೆಗಳಲ್ಲಿ ಅಷ್ಟೊಂದು ತೊಡಗಿಸಿಕೊಂಡಿರುವುದನ್ನು ನೋಡುವುದೇ ಒಂದು ಹಬ್ಬ. ಅವರ ಸುತ್ತಲಿರುವ ಪ್ರತಿಯೊಬ್ಬರೂ ತನ್ನಿಂತಾನೇ ಅದರಲ್ಲಿ ಭಾಗಿಗಳಾಗುತ್ತಾರೆ. ಗುರುಗಳು ಕೆಲಸಕ್ಕೆ ತರುವಂಥ ಪ್ರೇರಣೆ ಮತ್ತು ಕುತೂಹಲ, ನಾವೆಲ್ಲರೂ ಕಲಿತು ನಮ್ಮ ಜೀವನಗಳಲ್ಲಿ ಕಾರ್ಯಗತಗೊಳಿಸಲರ್ಹವಾಗಿವೆ. ಅವರು ಬೇರೆಯವರನ್ನು ಪ್ರೇರಿಸಲೆಂದು ನಿರ್ದಿಷ್ಟವಾಗಿ ಏನನ್ನೂ ಮಾಡುವುದಿಲ್ಲ ಬದಲಾಗಿ ತನ್ನ ಸ್ವ-ಪ್ರೇರಣೆಯನ್ನು ಮುಂದಕ್ಕೆ ತರುತ್ತಾರೆ ಮತ್ತು ಅದು ಸುತ್ತಲಿರುವವರ ಮೇಲೆ ಪ್ರಭಾವ ಬೀರುತ್ತದೆ.







ರವಿವಾರಗಳಂದು ನಿಯತಕ್ರಮದ ಸತ್ಸಂಗಗಳನ್ನು ಸೋ. ಕಮಲೇಶ್ ನಡೆಸಿಕೊಡುತ್ತಾರೆ ಮತ್ತು ಕುಟೀರದ ಅಂಗಳದಲ್ಲಿ ಸೋ. ಸಂಸ್ಕೃತ ಕಣ್ಣನ್ ನಡೆಸಿಕೊಡುವ ಗೀತಾ ಪ್ರವಚನ ಮುಂದುವರಿಯುತ್ತಿರುತ್ತದೆ. ಜ್ಞಾನಯೋಗಕ್ಕೆ ಸಂಬಂಧಿಸಿದ, ಗೀತೆಯ ಎರಡನೆ ಭಾಗ ಮುಂದುವರಿದಿದೆ. ಈ ಅವಧಿಗಳಿಗೆ ಹಾಜರಾತಿ ಹೆಚ್ಚಿದ್ದು, ಗುರುಗಳೊಂದಿಗೆ ಇದ್ದು ಪ್ರವಚನವನ್ನು ಕೇಳಬಯಸುವ ಅಭ್ಯಾಸಿಗಳ ಸುದೀರ್ಘವಾದ ಸಾಲನ್ನು ಕುಟೀರದ ಮುಂಭಾಗದಲ್ಲಿ ಮುಂಜಾನೆ 9.00 ಗಂಟೆಯ ಸುಮಾರಿಗೆ ಕಾಣಬಹುದು.

ಸೆಪ್ಟೆಂಬರ್ 11ರ ಬುಧವಾರ, ಗುರುಗಳು ಆಶ್ರಮದ ಹಿಂಭಾಗದಲ್ಲೇ ಇರುವ, ಡಾ. ನಟವರ್ ಅವರ ನಿವಾಸದ ಗೃಹಪ್ರವೇಶವನ್ನು ನೆರವೇರಿಸಿದರು. ಅವರು ನಿವಾಸದ ಸುತ್ತ ನಡೆದರು ಮತ್ತು ನಂತರ ಸುಮಾರು 45 ನಿಮಿಷಗಳ ಕಾಲ ಸತ್ಸಂಗವನ್ನು ನಡೆಸಿದರು. ಅಲ್ಲಿ ಸುಮಾರು 400 ಮಂದಿ ಅಭ್ಯಾಸಿಗಳು ಸೇರಿದ್ದರು. ಅದೊಂದು ಕೃಪಾಭರಿತ ಸನ್ನಿವೇಶವಾಗಿತ್ತು. ಗುರುಗಳು ಅಪರಾಹ್ನ ತಡವಾಗಿ ಕುಟೀರಕ್ಕೆ ಹಿಂತಿರುಗಿದರು. ಸಾಯಂಕಾಲ ಮತ್ತೆ ಅವರು ಕುಟೀರದಲ್ಲಿ ಸೇರಿದ್ದವರಿಗಾಗಿ ಇನ್ನೊಂದು ಸತ್ಸಂಗವನ್ನು ನಡೆಸಿಕೊಟ್ಟರು.

ಸೆಪ್ಟೆಂಬರ್ 12ರ ಗುರುವಾರ ಮಾಧುರಿಯ ಜನ್ಮದಿನವಾಗಿದ್ದು, ಆಕೆ ಮೊಣಕಾಲಿನ ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿರುವ ಕಾರಣ ಅವಳನ್ನು ಭೇಟಿಯಾಗಲು ಗುರುಗಳು ಗಾಯತ್ರಿಗೆ ಹೋಗ ಬಯಸಿದರು. ಗಾಯತ್ರಿಯಲ್ಲಿ ಅವರು ಮಾಧುರಿ ಮತ್ತು ಕುಟುಂಬದವರೊಡನೆ ಸಮಯ ಕಳೆದರು, ಹಜಾರದಲ್ಲಿ ಕುಳಿತು ಎಲ್ಲರೊಂದಿಗೆ ಮಾತನಾಡುತ್ತಿದ್ದರು. ಗುರುಗಳು, "ನನ್ನ ಮೊಮ್ಮಗಳ ಹುಟ್ಟುಹಬ್ಬದಲ್ಲಿ ಇರಲು ನಾನು ಅತ್ಯಂತ ಸಂತೋಷಪಡುತ್ತೇನೆ" ಎಂದರು.

## ಓಣಂ ಆಚರಣೆ

ಸೆಪ್ಟೆಂಬರ್ 16ರ ಸೋಮವಾರ ಓಣಂ ಹಬ್ಬವಾಗಿತ್ತು. ಕೇರಳದಿಂದ ಸುಮಾರು 350 ಅಭ್ಯಾಸಿಗಳು ಬಂದಿದ್ದರು. ಮುಂಜಾನೆ ಗುರುಗಳು ಕುಟೀರದ ಮುಂಭಾಗದಲ್ಲಿ ಅಭ್ಯಾಸಿಗಳು ಪೂಕಳಂ [ಪುಷ್ಪ ರಂಗವಲ್ಲಿ] ಸಿದ್ಧಪಡಿಸುವುದನ್ನು ನೋಡುತ್ತ ಸ್ವಲ್ಪಹೊತ್ತು ಕಳೆದರು. ಎಲ್ಲರಿಗೂ ಓಣಂ ಶುಭಾಶಯ ಹೇಳಿದರು. ಪೂರ್ವಾಹ್ನ 9.00 ಗಂಟೆಗೆ ಅವರು ಸತ್ಸಂಗವನ್ನು ನಡೆಸಿಕೊಡಲು ಅಭ್ಯಾಸಿಗಳು ಸೇರಿದ್ದ ಡಾರ್ಮೆಟರಿ A ಗೆ ಬಂದರು. ಸತ್ಸಂಗದ ಮೊದಲು ಧಾರ್ಮಿಕ ಆಚರಣೆಗಳು ಮತ್ತು ಜನರ ನಂಬಿಕೆಗಳ ಕುರಿತು ಮಾತನಾಡಿದ ಅವರು, "ಹಿಂದು, ಕ್ರೈಸ್ತ, ಮುಸ್ಲಿಂ ಎಂಬುದಿಲ್ಲ, ನಾವೆಲ್ಲರೂ ಮನುಜರು. ಪ್ರೇಮ ಎಂಬುದು ಅತ್ಯಂತ ಮುಖ್ಯವಾದ ಅಂಶವಾಗಿದ್ದು, ಅಂಥ ನಂಬಿಕೆಗಳೆಲ್ಲವನ್ನು ಜಯಿಸುವ ಏಕೈಕ ಅಸ್ತ್ರ ಅದು" ಎಂದರು. ಪ್ರತಿಯೊಬ್ಬ ಅಭ್ಯಾಸಿಯೂ ಸಹಜಮಾರ್ಗದ ರಾಯಭಾರಿ. ಪ್ರಶಿಕ್ಷಕರು ಮತ್ತು ಅಭ್ಯಾಸಿಗಳ ನಡುವೆ ವ್ಯತ್ಯಾಸವಿಲ್ಲ. ಪ್ರತಿಯೊಬ್ಬರೂ ಸಹಜಮಾರ್ಗದ ಬೆಳವಣಿಗೆಯಲ್ಲಿ ಭಾಗವಹಿಸಬೇಕಾಗಿದೆ ಎಂದು ಗುರುಗಳು ಹೇಳಿದರು. ಅಪರಾಹ್ನ ಅಡುಗೆಮನೆಯಲ್ಲಿ ವಿಶೇಷವಾದ ಓಣಂ ಹಬ್ಬದೂಟ ತಯಾರಿಸಲ್ಪಟ್ಟಿತ್ತು. ಮತ್ತು ಗುರುಗಳಿಗೆಂದು ಅದನ್ನು ಕುಟೀರಕ್ಕೆ ಕಳುಹಿಸಿಕೊಡಲಾಗಿತ್ತು.

ಸೆಪ್ಟೆಂಬರ್ 18ರಂದು ಬೆಳಿಗ್ಗೆ ಗುರುಗಳು ಅಸ್ವಸ್ಥರಿದ್ದು ವೈದ್ಯರು ಅವರಿಗೆ, ಕುಟೀರದ ರಿಪೇರಿ ಕೆಲಸಗಳನ್ನು ಮುಂದೂಡಿ ಅಲ್ಲೇ ಉಳಿಯುವಂತೆ ಶಿಫಾರಸು ಮಾಡಿದ್ದರು. ಆದರೂ ಅವರು 'ಗಾರ್ಡನ್ ಆಫ್ ಹಾರ್ಟ್ಸ್' ನಲ್ಲಿ ಸೋ. ಸತ್‌ಬೀರ್ ಅವರ ಮನೆಗೆ ಹೋದರು. ಯೋಜಿಸಿದ ಹಾಗೆ ಕೆಲಸಕಾರ್ಯಗಳು ನಡೆಯಬೇಕು ಎಂದು ಗುರುಗಳು ಹಟಹಿಡಿದಿದ್ದರು. ಗುರುಗಳು ಒಮ್ಮೆ ಏನನ್ನಾದರೂ ನಿಶ್ಚಯಿಸಿದರೆಂದರೆ ತನಗೆ ಅದು ಅನನುಕೂಲವಾದರೂ, ಹಾಗೆಂದು ಅವರಿಗೆ ಮನವರಿಕೆ ಮಾಡುವುದು ತೀರಾ ಕಷ್ಟ.

◆ ◆ ◆ ◆ ◆ ◆ ◆ ◆

ಸತ್‌ಬೀರ್ ಅವರ ಮನೆಯಲ್ಲಿ ಮೊದಲ ದಿನಗಳಲ್ಲಿ ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟರು. ಆದರೆ ಅನೇಕ ಅಭ್ಯಾಸಿಗಳು ಧ್ಯಾನಮಂದಿರಕ್ಕೆ ಹೋಗುವ ಬದಲು ಅಲ್ಲಿಗೆ ಬರುವುದನ್ನು ಗಮನಿಸಿ ಅವರು ಅದರ ಬಗ್ಗೆ ಅಸಮಾಧಾನಗೊಂಡರು. "ನೀವು ಎಲ್ಲೇ ಸತ್ಸಂಗದಲ್ಲಿ ಭಾಗವಹಿಸಿದರೂ ಅದೇ ಪ್ರಾಣಾಹುತಿಯನ್ನು ಪಡೆಯುವಿರಿ" ಎನ್ನುತ್ತ ಅವರು ಎಲ್ಲರನ್ನೂ ಧ್ಯಾನಮಂದಿರಕ್ಕೆ ಹೋಗಲು ಹೇಳಿದರು.

ಸೆಪ್ಟೆಂಬರ್ 21ರ ಶನಿವಾರದಂದು ಗುರುಗಳು 'ಗಾಯತ್ರಿ'ಗೆ ತೆರಳಿದರು. ಅವರು ಉತ್ಸಾಹದಿಂದಿದ್ದು ಕುಟುಂಬದಲ್ಲಿನ ಪ್ರತಿಯೊಬ್ಬರೊಂದಿಗೆ ಮಾತನಾಡಿದರು ಮತ್ತು ನೇರವಾಗಿ ಬೆಳಗಿನ ಉಪಾಹಾರಕ್ಕೆ ಮೇಜಿನತ್ತ ನಡೆದರು. ಉಪಾಹಾರದ ನಂತರ ಕಚೇರಿಗೆ ಹೋಗಿ ಸ್ವಲ್ಪ ಕೆಲಸ ಮಾಡಿದರು ಮತ್ತು ತನ್ನ ಕಂಪ್ಯೂಟರಿನಲ್ಲಿ ಕೆಲವು ಸಂದರ್ಶನ ಅವಧಿಗಳನ್ನು ವೀಕ್ಷಿಸಿದರು. ಮತ್ತೆ ಕೆಲವು ಅಭ್ಯಾಸಿಗಳನ್ನು ಭೇಟಿಯಾದರು ಮತ್ತು ಪ್ರತಿಯೊಬ್ಬರಿಗೂ ಒಂದು ಬೈಠಕ್ ಕೊಡಲು ನಿರ್ಧರಿಸಿದರು. ಗುರುಗಳಿಗೆ USAಯಿಂದ ಒಂದು ಗಾಲಿ ಕುರ್ಚಿ ಬಂದಿದ್ದು ಅದು ಇನ್ನಷ್ಟು ಉತ್ಕೃಷ್ಟತೆಯಿಂದ ಕೂಡಿದ್ದು, ಜೋಡಣೆಗಳ ಹೊಂದಾಣಿಕೆಯ ವ್ಯವಸ್ಥೆಯಿದೆ. ಗುರುಗಳು ಇದನ್ನು ಬಳಸಲು ಉತ್ಸುಕರಾಗಿದ್ದರು.









ಮಧ್ಯಾಹ್ನದೂಟದ ನಂತರ ಗುರುಗಳು ಬಂದು ಹಜಾರದಲ್ಲಿ ಕುಳಿತರು. ಅಲ್ಲಿ ಯುರೋಪಿನಿಂದ ಬಂದ ಅಭ್ಯಾಸಿಗಳ ಗುಂಪೊಂದು ಸೇರಿತ್ತು. ಗುರುಗಳು ಉಸಿರುಕಟ್ಟುವಿಕೆಯ ಕುರಿತು ಹೇಳಿದಾಗ ಡೆನ್ಮಾರ್ಕ್‌ನಿಂದ ಬಂದ ಸೋದರಿಯೊಬ್ಬರು ಅವರಿಗೆ ಒಂದು ಉಪಾಯವನ್ನು ಹೇಳಿಕೊಟ್ಟರು ಮತ್ತು ಅದು ಪವಾಡದಂತೆ ಕೆಲಸ ಮಾಡಿತು ಮತ್ತು ಐದು ನಿಮಿಷಗಳೊಳಗೆ ಗುರುಗಳ ಉಸಿರಾಟ ಸರಾಗವಾಯಿತು. ಸಾಯಂಕಾಲ, ತಾನು ವಿಶ್ರಾಂತಿಯ ಸಲುವಾಗಿ 'ಗಾಯತ್ರಿ'ಗೆ ಬಂದಿರುವುದಾಗಿ ಆಶ್ರಮದಲ್ಲಿ ಎಲ್ಲರಿಗೂ ತಿಳಿಸಬೇಕೆಂದು ಗುರುಗಳು ಸೂಚಿಸಿದರು.

ಸೆಪ್ಟೆಂಬರ್ 22ರ ರವಿವಾರ ಗುರುಗಳು ಗಾಯತ್ರಿಯಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಹಜಾರದಲ್ಲಿ ಕೆಲವು ವಿವಾಹಗಳನ್ನು ನೆರವೇರಿಸಿ ನವವಿವಾಹಿತರನ್ನು ಆಶೀರ್ವದಿಸಿದರು.

ಮುಂದಿನ ಎರಡು ದಿನಗಳಲ್ಲಿ ಗುರುಗಳು, ಸಂಸ್ಥೆಯ ಸಲುವಾಗಿ ಚೆನ್ನೈನಿಂದ ಸುಮಾರು 45 ಕಿ.ಮೀ. ಪಶ್ಚಿಮದಲ್ಲಿರುವ, ತಿರುವಲ್ಲೂರು ಜಮೀನು ಖರೀದಿಸುವ ವಿಷಯದಲ್ಲಿ ಕಾರ್ಯನಿರತರಾಗಿದ್ದರು. ಜಮೀನಿನ ಒಡೆಯರಾಗಿದ್ದ ಕುಟುಂಬ ಸದಸ್ಯರೆಲ್ಲರೂ 'ಗಾಯತ್ರಿ'ಗೆ ಬಂದಿದ್ದರು. ಗುರುಗಳು ಅವರನ್ನು ವೈಯಕ್ತಿಕವಾಗಿ ಭೇಟಿಯಾಗಿ ಪ್ರತಿಯೊಬ್ಬರಿಗೂ ಊಟವಾಯಿತೆಂಬುದನ್ನು ಖಾತ್ರಿಪಡಿಸಿಕೊಂಡರು. ಒಪ್ಪಂದ ಮತ್ತು ಮಾರಾಟಪತ್ರಗಳಿಗೆ ಸಹಿ ಹಾಕುವುದೇ ಒಂದು ಭಾರೀ ಕೆಲಸವಾಗಿದ್ದು ಸುಮಾರು 300 ಸಹಿಗಳನ್ನು ಹಾಕಬೇಕಾಗಿದ್ದು ಆ ದಾಖಲೆಪತ್ರಗಳೆಲ್ಲವನ್ನೂ ಸಿದ್ಧಪಡಿಸುವಾಗ, ಎರಡೂ ದಿನಗಳಲ್ಲಿ ತಡರಾತ್ರಿಯಲ್ಲಿ ಅಂತಿಮವಾಗಿ ಕೆಲಸವನ್ನು ಸಂಪೂರ್ಣಗೊಳಿಸುವಾಗ ಗುರುಗಳ ಮೊಗದಲ್ಲಿ ಮುಗುಳುನಗೆಯೊಂದಿತ್ತು. ಇದನ್ನು ಮಾಡುತ್ತಿರುವಾಗ ಗುರುಗಳು ನಿಜವಾಗಿ ಖುಷಿಪಟ್ಟಿದ್ದು, ನಾವೇನು ಮಾಡುತ್ತೇವೋ ಅದನ್ನು ಖುಷಿಯಿಂದ ಮಾಡುವಾಗ ಅದು ಕಿರಿಕಿರಿಯೆನಿಸುವುದಿಲ್ಲ ಎಂಬುದನ್ನು ನಮಗೆ ಕಲಿಸಿದರು.

ಸೆಪ್ಟೆಂಬರ್ 28ರಂದು ಶನಿವಾರ ಗುರುಗಳು ಆಶ್ರಮಕ್ಕೆ ಮರಳಿ ಬಂದರು. ನವೆಂಬರ್ ತಿಂಗಳಿಗೆ ಒಂದು ಐರೋಪ್ಯ ವಿಚಾರಸಂಕಿರಣ ಯೋಜಿತವಾಗಿದ್ದು, 'ಅಜ್ಞಾನದಿಂದ – ಅರಿಯುವಿಕೆಗೆ – ಅರಿಯದಿರುವಿಕೆಗೆ' ಅದರ ವಸ್ತುವಾಗಿದೆ. ಗುರುಗಳು ಈ ವಿಷಯದಲ್ಲಿ ತುಂಬ ನಿಮಗ್ನರಾಗಿದ್ದು ಚರ್ಚೆಯು ಸಂಕಲ್ಪ ಮತ್ತು ಯೋಚಿಸುವಿಕೆ ಯ ಕಡೆಗೆ ಸಾಗಿತ್ತು. ಗುರುಗಳೆಂದರು, "ಸಂಕಲ್ಪವು ಅರಿಯುವಿಕೆ ಮತ್ತು ಮಾಡುವಿಕೆಗಳ ನಡುವಿನ ಕೊಂಡಿಯಾಗಿದೆ. 'Aude Sapere' [ಆಡೆ ಸಪೇರೆ–ಯೋಚಿಸಲು ಧೈರ್ಯ], ಆದರೆ ನೀವು ಯೋಚಿಸಲು ಧೈರ್ಯ ಮಾಡಿದ ಮೇಲೆ, ನೀವು ಅದನ್ನು ಮಾಡಬೇಕು ಮತ್ತು ಅದಕ್ಕೆ ಸಂಕಲ್ಪದ ಅಗತ್ಯವಿದೆ. ನೀವು ಸಂಕಲ್ಪವನ್ನು ಬಳಸಿದ ಹಾಗೆ ನಿಮ್ಮ ಆಯ್ಕೆಗಳು ಕಡಿಮೆಯಾಗುವವು. ಇದು ಸರಳ ಬದುಕಿನತ್ತ ಕೊಂಡೊಯ್ಯುತ್ತದೆ. ಆದ್ದರಿಂದ ನೋಡಿ, ಸರಳವಾಗಿರಿ ಮತ್ತು ಪ್ರಕೃತಿಯೊಡನೆ ಸಮರಸವಾಗಿರಿ ಎಂಬುದು ನಿಮ್ಮ ಸಂಕಲ್ಪವನ್ನು ಬಳಸಿ ಆಯ್ಕೆಗಳನ್ನು ಕಡಿತಗೊಳಿಸುವ ಈ ರೀತಿಯಲ್ಲಿ ಸಾಧ್ಯ. ಸರಳ ಜೀವನ ಸುಲಭವಲ್ಲ."

## ತಿರುವಲ್ಲೂರಿಗೆ ಭೇಟಿ

ಕಳೆದ ಕೆಲದಿನಗಳಲ್ಲಿ ಚೆನ್ನೈಯ ಪಶ್ಚಿಮದಲ್ಲಿ ಸುಮಾರು 45 ಕಿ.ಮೀ. ದೂರದಲ್ಲಿ ತಿರುವಲ್ಲೂರು ಜಿಲ್ಲೆಯಲ್ಲಿ ಸಹಜಮಾರ್ಗ ಆಧ್ಯಾತ್ಮಿಕ ಪ್ರತಿಷ್ಠಾನಕ್ಕಾಗಿ 113 ಎಕರೆಗಳ ಜಮೀನು ನೋಂದಾಯಿಸಲ್ಪಟ್ಟಿತ್ತು. ಗುರುಗಳು ಆ ಆಸ್ತಿಯನ್ನು ನೋಡಬಯಸಿದ್ದರು. ಸೋ. ವಿನಯಕೃಷ್ಣ ಅವರ ನೇತೃತ್ವದಲ್ಲಿ ಸ್ವಯಂಸೇವಕರು ಒಂದು ರಾತ್ರಿಯೊಳಗಾಗಿ ಅಲ್ಲಿ, ಧ್ಯಾನಕ್ಕಾಗಿ ಒಂದು ಶಾಮಿಯಾನ, ಗುರುಗಳ ಗುಡಾರ, ಮತ್ತು ಅಭ್ಯಾಸಿಗಳ ಸಲುವಾಗಿ ಚಲನಶೀಲ ಶೌಚಾಲಯಗಳ ಏರ್ಪಾಡುಗಳನ್ನು ಮಾಡಿದರು. ಚೆನ್ನೈ ಮತ್ತು ತಿರುವಲ್ಲೂರಿನ ಸುತ್ತಮುತ್ತಲಿಂದ ಬಂದ ಸುಮಾರು ಮುನ್ನೂರು ಮಂದಿ ಅಭ್ಯಾಸಿಗಳು ಅಲ್ಲಿ ಸೇರಿದ್ದರು.

ಸೆಪ್ಟೆಂಬರ್ 28ರಂದು ಪೂರ್ವಾಹ್ನ ಸುಮಾರು 8.30 ಗಂಟೆಗೆ ಗುರುಗಳು, ಅವರಿಗಾಗಿ ವಿಶೇಷ ಆಸನವನ್ನು ಜೋಡಿಸಿದ್ದ ಮರ್ಸಿಡಿಸ್ ವ್ಯಾನ್‌ನಲ್ಲಿ ನಿವೇಶನಕ್ಕೆ ಬಂದಿಳಿದರು. ಅವರು ಪ್ರಸಾದವನ್ನು ಅರ್ಪಿಸಿ, ಧ್ಯಾನದ ಶಾಮಿಯಾನಕ್ಕೆ ಬಂದರು. ಸುಮಾರು 45 ನಿಮಿಷಗಳ ಬೈಠಕ್ ಕೊಟ್ಟ ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅವರು ಆ ಜಮೀನನ್ನು ಉಪಯೋಗಿಸುವ ಬಗೆಗಿನ – ಆರೋಗ್ಯ ಕೇಂದ್ರ, ಧ್ಯಾನಮಂದಿರ, ಕೃಷಿ, ಹೈನು ವ್ಯವಸಾಯ ಇತ್ಯಾದಿ.. ಕೆಲವು ಯೋಚನೆಗಳನ್ನು ಬಹಿರಂಗ ಪಡಿಸಿದರು. ಹೇಗಿದ್ದರೂ ಮುಖ್ಯ ಚಟುವಟಿಕೆ ಧ್ಯಾನವೇ ಆಗಿರುವುದೆಂದು ಹೇಳಿದರು. ತಿರುವಲ್ಲೂರು ಜಿಲ್ಲೆಯ ಕಲೆಕ್ಟರ್, ಹೊಸ ಅಭ್ಯಾಸಿಯಾಗಿರುವ ಶ್ರೀ ವೀರರಾಘವ ರಾವ್ ಅವರು, ಜಿಲ್ಲಾ ಆಡಳಿತದಿಂದ ಸಕಲ ಸಹಾಯವನ್ನೊದಗಿಸುವ ಭರವಸೆಯನ್ನು ನೀಡಿದರು. ಆ ಜಾಗವನ್ನು ಮಾರಿದ್ದ ಕುಟುಂಬದ ಸುಮಾರು ಮೂವತ್ತು ಮಂದಿ ಸದಸ್ಯರು ಬಂದು ಗುರುಗಳನ್ನು ಭೇಟಿಯಾದರು. ಗುರುಗಳು ಅವರಿಗೆ ಪ್ರಸಾದವನ್ನು ನೀಡಿ, ಅವರೊಂದಿಗೆ ಛಾಯಾಚಿತ್ರವನ್ನು ತೆಗೆಸಿಕೊಂಡರು. ಅಭ್ಯಾಸಿಗಳು ತಂದಿದ್ದ ಒಂದು ಚಾಕೊಲೇಟ್ ಕೇಕನ್ನು ಗುರುಗಳು ಕತ್ತರಿಸಿದರು ಮತ್ತು ಅದನ್ನು ಎಲ್ಲರಿಗೂ ಹಂಚಲಾಯಿತು. ಗುರುಗಳ ವಿಶ್ರಾಂತಿಗಾಗಿ ಅಲ್ಲಿ ಏರ್ಪಾಡುಗಳನ್ನು ಮಾಡಿದ್ದರೂ ಅವರು ವಿಶ್ರಾಂತಿ ತೆಗೆದುಕೊಳ್ಳಲಿಲ್ಲ, ಬದಲಾಗಿ ತನ್ನ ಗಾಲಿ ಕುರ್ಚಿಯಲ್ಲಿ ಕುಳಿತು ಉಪಾಹಾರವನ್ನು ಸ್ವೀಕರಿಸಿದರು. ಪಡೆದುಕೊಂಡ ಇಡೀ ಜಾಗವು ಭತ್ತ, ಬಾಳೆ ಮತ್ತು ತೆಂಗುಗಳ ಕೃಷಿಭೂಮಿಯಾಗಿದ್ದು ಸಂಪೂರ್ಣ ಹಸಿರಿನಿಂದ ಕಂಗೊಳಿಸುತ್ತಿದೆ. ಜಮೀನಿನಲ್ಲಿ ಅನೇಕ ತೆರೆದ ಬಾವಿಗಳೂ, ಕೊಳವೆ ಬಾವಿಗಳೂ ಇವೆ. ಗುರುಗಳು ಲಭ್ಯವಿದ್ದ ಕೆಲವು ರಸ್ತೆಗಳಲ್ಲಿ ತನಗೆ ಸಾಧ್ಯವಿದ್ದಷ್ಟು ದೂರ ಹೋಗಿ ಆ ಆಸ್ತಿಯನ್ನು ನೋಡಿ, ಬಳಿಕ ಚೆನ್ನೈಗೆ ಮರಳಿದರು.

29ರಂದು ಗೀತಾ ಪ್ರವಚನದ ಬಳಿಕ ಗುರುಗಳು ಸ್ವಲ್ಪಹೊತ್ತು ಮಾತನಾಡಿದರು. ಅವರು, "ಈಗ ನಾವು ಅನೇಕ ಪ್ರವಚನಗಳನ್ನು ಕೇಳಿದ್ದೇವೆ ಮತ್ತು ಸೋ. ಸಂಸ್ಕೃತ ಕಣ್ಣನ್ ಶ್ಲೋಕಗಳನ್ನು ಸವಿಸ್ತಾರವಾಗಿ ವಿವರಿಸಿದ್ದಾರೆ, ಇದು ನಾವು ವಿಷಯವನ್ನು ಹೀರಿಕೊಂಡು

ಜೀರ್ಣಿಸಿಕೊಳ್ಳಬೇಕಾದ ಸಮಯ. ಹಾಗಾಗಿ ಮುಂದಿನ ಎರಡು ರವಿವಾರಗಳಂದು ಪ್ರಶ್ನೋತ್ತರ ಅವಧಿಯಿರುತ್ತದೆ'' ಎಂದರು.

## ಅಕ್ಟೋಬರ್, 2013







### ಚೀನೀ ವಿಚಾರಸಂಕಿರಣ

ಅಕ್ಟೋಬರ್ 1, 2013. ಮಂಗಳವಾರ: ಮುಖ್ಯವಾಗಿ ಚೀನಾದಿಂದ ಮತ್ತು ಇತರ ದೇಶಗಳಿಂದ ಬಂದ ಸುಮಾರು 110 ಚೀನೀಯರು ಒಂದು ವಿಚಾರಸಂಕಿರಣದಲ್ಲಿ ಭಾಗವಹಿಸಲು ಮಣಪಾಕ್ಕಂನಲ್ಲಿದ್ದರು. ಗುರುಗಳು ಈ ವಿಚಾರಸಂಕಿರಣವನ್ನು ಎದುರುನೋಡುತ್ತಿದ್ದರು. ಗುರುಗಳು ತನ್ನ ಕೋಣೆಯಿಂದ ಹೊರಬರುವ ಮೊದಲು, ಪೂರ್ವಾಹ್ನ 8.30ರ ಹೊತ್ತಿಗೇ ಕುಟೀರದಲ್ಲಿ ಜಮಾಯಿಸಿದ್ದ ಅಭ್ಯಾಸಿಗಳನ್ನು ಅಭಿವಾದಿಸಲೆಂದು ಬೇಗನೆ ಕೆಲವು ಚೀನೀ ಶಬ್ದಗಳನ್ನು ಕಲಿತುಕೊಂಡರು. ನಡೆದುಕೊಂಡು ಬರುತ್ತಿದ್ದ ಹಾಗೆ, ಅವರು ಚೀನೀ ಭಾಷೆಯಲ್ಲಿ ಮಾತನಾಡಿದರು, ಅದಕ್ಕೆ ಗಟ್ಟಿಯಾದ ಕರತಾಡನದ ಸ್ವಾಗತ ಸಿಕ್ಕಿತು. ಗುರುಗಳು, ತನಗೆ ಚೀನೀ ಭಾಷೆ ಕಲಿಯಲಾಗದುದಕ್ಕೆ ಖೇದ ವ್ಯಕ್ತಪಡಿಸಿದರು ಮತ್ತು ಅದನ್ನು ಕಲಿಯಲು ಮತ್ತು ಚೀನಾಕ್ಕೆ ಪ್ರಯಾಣಿಸಲು ಈಗ ತಾನು ತೀರಾ ವೃದ್ಧನೆಂದರು. ಹೆಚ್ಚು ಹೆಚ್ಚು ಚೀನೀ ಅಭ್ಯಾಸಿಗಳು ಪ್ರತಿವರ್ಷ ಚೆನ್ನೈಗೆ ಬರಲು ಪ್ರಯತ್ನಿಸಬೇಕೆಂದು ಗುರುಗಳು ಹೇಳಿದರು. ಅವರು ಗಾಂಗ್ಟೋಕ್[ಸಿಕ್ಕಿಂ, ಭಾರತ] ಆಶ್ರಮವನ್ನು ಉಲ್ಲೇಖಿಸಿ, ಅದು ಪುನಶ್ಚೇತನಕ್ಕೆಂದು ಹೋಗಲು ಉತ್ತಮ ಸ್ಥಳವೆಂದೂ ಅಭ್ಯಾಸಿಗಳು ಆ ಸೌಲಭ್ಯವನ್ನು ಉಪಯೋಗಿಸಬಹುದೆಂದೂ ಹೇಳಿದರು. ಆ ಮೇಲೆ ಗುರುಗಳು ಒಂದು ಬೈಠಕ್ ಕೊಟ್ಟರು. ತದನಂತರ ಅಭ್ಯಾಸಿಗಳು ಡಾರ್ಮಿಟರಿ A ಯಲ್ಲಿ ವಿಚಾರಸಂಕಿರಣವನ್ನು ಮುಂದುವರಿಸಿದರು.

ಮರುದಿನ ಗುರುಗಳು ಮೋಟರ್ ಅಳವಡಿಸಿದ ಗಾಲಿಕುರ್ಚಿಯಲ್ಲಿ ಸೋ. ಗೀತುರವರ ನಿವಾಸದ ಉದ್ಘಾಟನೆಗೆಂದು ಹೋದರು. ವಿಚಾರಸಂಕಿರಣದಲ್ಲಿ ಭಾಗವಹಿಸಿದವರನ್ನೂ ಆಹ್ವಾನಿಸಲಾಗಿತ್ತು. ಅವರು ಸಾಯಂಕಾಲ ಕುಟೀರಕ್ಕೆ ಬಂದರು. ಗುರುಗಳು ಗಾಲಿಕುರ್ಚಿಯಲ್ಲಿ ಸ್ವಲ್ಪ ತಿರುಗಾಡುತ್ತಿರುವುದರಿಂದಾಗಿ ಅವರ ಕಾಲುಗಳಲ್ಲಿ ಗುಳ್ಳೆಗಳುಂಟಾಗಿವೆ. ಈ ಗುಳ್ಳೆಗಳು ಒಡೆದು ಕಾಲುಗಳಲ್ಲಿ ಅತೀವ ವೇದನೆಯನ್ನುಂಟುಮಾಡಿವೆ. ವೈದ್ಯರು ಸ್ವಲ್ಪ ಭಾಗ ಚರ್ಮವನ್ನು ತೆಗೆಯಬೇಕಾಗಿದ್ದು ಅವು ಗುಣವಾಗುವ ತನಕ ಗುರುಗಳು ಕಾಲುಗಳನ್ನು ಎತ್ತರಿಸಿ ಇಡಬೇಕಾಗಿದೆ. ಅವರು ಈಗಾಗಲೇ ಅನುಭವಿಸುತ್ತಿರುವುದು ಸಾಲದೆಂಬಂತೆ ಈ ಹೊಸ ತೊಂದರೆಯನ್ನು ಅವರು ಅನುಭವಿಸುವುದನ್ನು ನೋಡುವುದು ದುಃಖದಾಯಕವಾಗಿದೆ.

ಅಕ್ಟೋಬರ್ 4ರಂದು ಸೋ. ಪಿ. ಆರ್. ಕೃಷ್ಣ ಇತರ ಅಭ್ಯಾಸಿಗಳೊಂದಿಗೆ ಜಮೀನು ಪರಿಶೀಲನೆಗೆ ಮತ್ತು ಪೂರ್ವಭಾವಿ ಯೋಜನೆಯೊಂದನ್ನು ಹಾಕಿಕೊಳ್ಳಲು ತಿರುವಳ್ಳೂರಿಗೆ ತೆರಳಿದರು. ಸೋ. ಪಿ. ಆರ್. ಕೃಷ್ಣ ಈ ಜಮೀನಿಗೆ ಸಂಬಂಧಿಸಿದ ಎಲ್ಲ ಪ್ರಯತ್ನಗಳನ್ನು ನಿರ್ವಹಿಸಲಿರುವರೆಂದು, ತಾನು ಸದ್ಯ ಮುಖ್ಯವಾಗಿ ಕೃಷಿಗೆ ಗಮನವನ್ನು ಹರಿಸುವೆನೆಂದು ಗುರುಗಳು ಹೇಳಿದರು.

ಶನಿವಾರ ಬೆಳಿಗ್ಗೆ ಗುರುಗಳು ವಿಚಾರಸಂಕಿರಣದಲ್ಲಿ ಭಾಗವಹಿಸುತ್ತಿರುವವರನ್ನು ಭೇಟಿಯಾಗಲು ಯೋಜನೆ ಹಾಕಿಕೊಂಡಿದ್ದರು. ಆದರೆ ಅಸೌಖ್ಯವಿದ್ದ ಕಾರಣದಿಂದಾಗಿ ಅವರಿಗೆ ಹೊರಗೆ ಬರಲಾಗಲಿಲ್ಲ. ಆದರೆ ಅವರು ಸಹನೆಯಿಂದ ಆ ದಿನ ಹೊರಡಲಿದ್ದ ಇಪ್ಪತ್ತು ಅಭ್ಯಾಸಿಗಳನ್ನು ಭೇಟಿಯಾದರು. ಸೋ. ಕಮಲೇಶ್‌ರವರು ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಡಾರ್ಮಿಟರಿ A ಯಲ್ಲಿ, ಉಳಿದ ಅಭ್ಯಾಸಿಗಳನ್ನುದ್ದೇಶಿಸಿ ಮಾತನಾಡಿದರು.

ರವಿವಾರ, ಗುರುಗಳು ಅಸ್ವಸ್ಥರಾಗಿದ್ದ ಕಾರಣ ಅವರು ಧ್ಯಾನಮಂದಿರದಲ್ಲಿ ಸತ್ಸಂಗವನ್ನು ನಡೆಸಿಕೊಡಲು ಸೋ. ಕಮಲೇಶ್‌ರವರಿಗೆ ಹೇಳಿದರು. ಹಾಗೂ ವಿಚಾರಸಂಕಿರಣದಲ್ಲಿ ಭಾಗವಹಿಸುವವರಿಗೆ ಕುಟೀರದಲ್ಲಿ ಸತ್ಸಂಗವನ್ನು ನಡೆಸಿಕೊಡಲು ಸೋ. ಕೃಷ್ಣ ಅವರಿಗೆ ಹೇಳಿದರು. ಸತ್ಸಂಗದ ನಂತರ ಗುರುಗಳು ಹೊರಬಂದು ಆ ಗುಂಪಿನೊಡನೆ ಸ್ವಲ್ಪ ಹೊತ್ತು ಕಳೆದರು. ವಾತಾವರಣವು ಅವರ ಪ್ರೇಮದಿಂದ ಪೂರಿತವಾಗಿದ್ದು ಅನೇಕ ಅಭ್ಯಾಸಿಗಳ ಕಣ್ಣಲ್ಲಿ ಕಂಬನಿಯುಕ್ಕಿತ್ತು. ಅಭ್ಯಾಸಿಗಳ ಹೃದಯಗಳು ಗುರುಗಳ ಗಾಢಸ್ಪರ್ಶವನ್ನು ಪಡೆದಿದ್ದವು.

ಗುರುಗಳು ಸೇರಿದ್ದ ಎಲ್ಲರಿಗೂ ಕೊಡಲೆಂದು ಸಿಹಿ ಮತ್ತು ಕಜ್ಜಾಯಗಳನ್ನು ತಯಾರಿಸಲು ಅಡುಗೆಮನೆ ತಂಡಕ್ಕೆ ಹೇಳಿದರು. ಚೀನೀ ಮತ್ತು ವಿಯೆಟ್ನಾಮಿ ಅಭ್ಯಾಸಿಗಳು ಒಂದು ಪುಟ್ಟ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಿದರು. ಈ




ಸಭೆಯಲ್ಲಿ ಗುರುಗಳು ತನ್ನ ಸಕಲವನ್ನೂ ನೀಡಿದುದು ಅನುಭವಕ್ಕೆ ಬಂದಿತು. ತನ್ನ ಅನಾರೋಗ್ಯದ ಹೊರತಾಗಿಯೂ ಅವರು ಆ ದಿನ ಹೊರಡಲಿದ್ದ ಅಭ್ಯಾಸಿಗಳೊಂದಿಗೆ ಸಮಯ ಕಳೆದರು.

ಚೈನೀಸ್ ಭಾಷೆಯ ಬಗ್ಗೆ ಗುರುಗಳು ಹೇಳಿದರು, “ಮನಸ್ಸು ಮಾಡಿದರೆ, ನಾವು ಯಾವ ಭಾಷೆಯನ್ನು ಬೇಕಾದರೂ ಕಲಿಯಬಹುದು. ನಾನು ಚೈನೀಸ್ ಕಲಿಯುತ್ತಿದ್ದೇನೆ. ಆಂಗ್ಲದಲ್ಲಿ ಐವತ್ತೆರಡು ನಾದಗಳಿದ್ದರೆ, ಚೈನೀಸ್‌ನಲ್ಲಿ ನಾಲ್ಕೇ ಇವೆ. ಚೈನೀಸ್ ಒಂದು ಚೆಲುವಾದ, ಅರ್ಥಪೂರ್ಣವಾದ ಭಾಷೆ. ಉದಾಹರಣೆಗೆ, ಚೈನೀಸ್‌ನಲ್ಲಿ ‘ಸಂತೋಷ’ವನ್ನು ಎರಡೇ ಅಕ್ಷರಗಳಲ್ಲಿ ಬರೆಯುತ್ತಾರೆ, ಅದರ ನಿಜವಾದ ಅರ್ಥ ‘ಹೃದಯವನ್ನು ತೆರೆಯಿರಿ’ ಎಂದು.”

ಅಕ್ಟೋಬರ್ 7, ಚೀನಾ ಸಭೆಯ ಕೊನೆಯ ದಿನವಾಗಿದ್ದಿತು. ಗುರುಗಳು ಭಾಗಿಗಳಿಗೆ ಸುಮಾರು 45 ನಿಮಿಷಗಳ ಕಾಲ ಬೈಠಕ್ ನೀಡಿದರು. ಬೈಠಕಿನ ನಂತರ, ಗುರುಗಳು ಆಯಾಸಗೊಂಡಿದ್ದರೂ ಸಹ ಕೆಲವು ಅಭ್ಯಾಸಿಗಳನ್ನು ಭೇಟಿ ಮಾಡಿ, ಶುಭ ಕೋರಿ, ವಿಶ್ರಾಂತಿಗೆ ತೆರಳಿದರು. ಸಂಜೆ, ಕಾನ್ಹಾ ಯೋಜನೆಯಡಿ ಕಾರ್ಯಗೈಯುತ್ತಿರುವ ಅಭ್ಯಾಸಿಗಳು ಗುರುಗಳೊಂದಿಗೆ ಸಮಾಲೋಚನೆ ನಡೆಸಿದರು ಹಾಗು ಗುರುಗಳು ಅವರಿಗೆಲ್ಲ ಬೈಠಕನ್ನು ನೀಡಿದರು.

*“ಎಲ್ಲರಿಗೂ ಜೀವನವಿದೆ, ಆದರೆ ನಾವು, ತನ್ನ ಸ್ವಂತ ಸತ್ವದೊಡನೆ ಲಯವಾಗುವ ಜೀವನದಲ್ಲಿಯ ಜೀವವನ್ನು ಅರಸಬೇಕು.”*

ರಾಮಚಂದ್ರರ ಸಮಗ್ರ ಕೃತಿಗಳು, ಸಂ. 3



## ಸೋ. ಕಮಲೇಶ್ ಪಟೇಲರವರ ಗುಜರಾತ್ ಪ್ರವಾಸ

ಸೋ. ಕಮಲೇಶ್‌ರವರು ಸೆಪ್ಟೆಂಬರ್ 11ರಂದು ಅಹಮದಾಬಾದಿಗೆ ಆಗಮಿಸಿದರು. ಇದು ಅವರ ಖಾಸಗಿ ಪ್ರವಾಸವೆಂದು ಪೂರ್ವಸೂಚಿತವಾಗಿದ್ದರೂ ಪ್ರವಾಸಕಾಲದಲ್ಲಿ ಅವರು ಗುಜರಾತಿನ ಪ್ರಮುಖ ಕೇಂದ್ರಗಳಿಗೆ ಭೇಟಿ ನೀಡಿದರು. ಅವರು 15 ರಂದು ಅಹಮದಾಬಾದಿನ ಅಡಲಾಜ್ ಆಶ್ರಮದಲ್ಲಿ ನೆರೆದಿದ್ದ ಸುಮಾರು 900 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು ಹಾಗು ಸಾಧನೆಯ ಕ್ರಮಬದ್ಧತೆ ಮಹತ್ವದ ಬಗ್ಗೆ ಒತ್ತಿ ಹೇಳಿದರು. ಧ್ಯಾನದ ಉದ್ದೇಶವಾದ, ನಮ್ಮ ಪ್ರಜ್ಞೆಯನ್ನು ಹೆಚ್ಚು ಪವಿತ್ರ ಹಾಗು ಸಂವೇದನಾಶೀಲವಾಗಿಸಿಕೊಳ್ಳುವುದರ ಬಗ್ಗೆ ಸಹ ಅವರು ವಿವರಿಸಿ ಹೇಳಿದರು. ಅಹಮದಾಬಾದಿನಲ್ಲಿ ಸೀಮಿತ ಆವೃತ್ತಿಯ ‘ಇಸೊಟೊರಿಕ್ ಚಿಹ್ನೆ ಪದಕ’ ವನ್ನು ಅವರು ಪರಿಚಯಿಸಿದರು. ಇತರೆ ಕೇಂದ್ರಗಳಿಂದ ಬಂದಿದ್ದ ಅಭ್ಯಾಸಿಗಳ ಗುಂಪುಗಳನ್ನೂ ಸಹ ಅವರು ಭೇಟಿ ಮಾಡಿದರು. 16ರಂದು ಅವರು ಕಮಲಾಪುರಕ್ಕೆ ಭೇಟಿ ನೀಡಿ ನಂತರ ಮಂಗಳವಾರ ಭಾವನಗರಕ್ಕೆ ತೆರಳಿದರು. ಅವರು ತಮ್ಮ ಗುರುಗಳೊಂದಿಗೆ ಹಂಚಿಕೊಂಡ ಬಹು ಮುಖ್ಯ ಗಳಿಗೆ ಯಾವುದು ಎಂಬ ಪ್ರಶ್ನೆಗೆ ಅದು ತಮ್ಮನ್ನು ಅವರ ಉತ್ತರಾಧಿಕಾರಿಯಾಗಿ ನೇಮಕ ಮಾಡಿದ ಸಂದರ್ಭವೆಂದು ಅವರು ಉತ್ತರಿಸಿದರು. ನಂತರ ಅವರು ವಡೋದರ ಮತ್ತು ಸೂರತ್‌ಗೆ ತೆರಳಿದರು.



ಸೂರತ್‌ನಲ್ಲಿ ನಡೆದ ಪ್ರಶ್ನೋತ್ತರ ಸಮಾವೇಶದಲ್ಲಿ ಅವರು ಸಾಧನೆಯ ಅನೇಕ ಮುಖಗಳ ಬಗ್ಗೆ ವಿವರಿಸಿದರು. ಓರ್ವ ಅಭ್ಯಾಸಿಯು ಸೂರತ್ ಕೇಂದ್ರಕ್ಕಾಗಿ ಒಂದು ಧ್ಯಾನಮಂದಿರವನ್ನು ನಿರ್ಮಿಸಿ ದಾನಮಾಡಲು ಬಯಸಿದ್ದಕ್ಕೆ ಅವರು ಒಪ್ಪಿಗೆ ನೀಡಿದರು. ನಂತರ ಅವರು ನವಸಾರಿ ಆಶ್ರಮಕ್ಕೆ ಹೊರಟರು ಮತ್ತು ಅಲ್ಲಿಂದ ವಲ್ಸಾಡ್‌ಗೆ ಪ್ರಯಾಣ ಬೆಳೆಸಿದರು. ಅಲ್ಲಿಯ ಜನತೆಯನ್ನು ಭೇಟಿ ಮಾಡಿ ಸತ್ಸಂಗವನ್ನು ನಡೆಸಿಕೊಟ್ಟ ನಂತರ ಅಂದು ರಾತ್ರಿ ವಡೋದರಕ್ಕೆ ಹಿಂತಿರುಗಿದರು. ಸೆಪ್ಟೆಂಬರ್ 21ರಂದು, ಗುಜರಾತಿನ ನಾನಾ ಭಾಗಗಳಿಂದ ಆಗಮಿಸಿದ್ದ ಸುಮಾರು 1000 ಅಭ್ಯಾಸಿಗಳು ವಡೋದರದಲ್ಲಿ ಸೇರಿದ್ದರು. ಭಾನುವಾರದ ಸತ್ಸಂಗದ ತರುವಾಯ ಸಾಧನೆಯ ಸೂಕ್ಷ್ಮಸ್ತರ ವಿಜ್ಞಾನಕ್ಕೆ ಸಂಬಂಧಿಸಿದಂತೆ ಅವರು ಮಾತನಾಡಿದರು. ಮರುದಿನ ಅವರು ಆನಂದ್‌ಗೆ ಭೇಟಿ ನೀಡಿ 25 ರಂದು ಅಹಮದಾಬಾದ್‌ಗೆ ಹಿಂತಿರುಗಿದರು. 27ರಂದು ಅವರು ಅಡಾಲಜ್ ಕೇಂದ್ರಕ್ಕೆ ಭೇಟಿ ನೀಡಿ Grounding in the practice – ಅಭ್ಯಾಸದಲ್ಲಿ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮಕ್ಕೆ ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಿಂದ 75 ಅಭ್ಯಾಸಿಗಳು ಭಾಗವಹಿಸಿದ್ದರು. 30 ರಂದು ಅವರು ಕಾಡಿಯಲ್ಲಿ ಸತ್ಸಂಗವನ್ನು ನಡೆಸಿದರು. ಇದರಲ್ಲಿ ಕಡಿ, ಪಾಲನ್ಪುರ, ಮೆಹ್‌ಸಾನ, ಕಲೋಲ್ ಮತ್ತು ಉನ್‌ಝ ಕೇಂದ್ರಗಳಿಂದ ಅಭ್ಯಾಸಿಗಳು ಪಾಲ್ಗೊಂಡಿದ್ದರು. ಅವರಲ್ಲಿ ಬಹುಪಾಲು ಹೊಸ ಆಕಾಂಕ್ಷಿಗಳಿದ್ದರು. ಸೋ. ಕಮಲೇಶ್‌ರವರು ಜೀವನದಲ್ಲಿ ಇಂತಹ ಸೂಕ್ಷ್ಮ ಸಂವೇದನೆಯುಳ್ಳ ಮಾರ್ಗವನ್ನು ಅಂಗೀಕರಿಸುವುದರ ಮಹತ್ವವನ್ನು ವಿವರಿಸಿದರು. ನಂತರ ಅಹಮದಾಬಾದಿಗೆ ತೆರಳುವ ಮುನ್ನ ಕಲೋಲ್‌ನಲ್ಲಿ ಅವರು ಅಭ್ಯಾಸಿಗಳೊಂದಿಗೆ ಸಮಯ ಕಳೆದರು. ಅಕ್ಟೋಬರ್ 2 ರಂದು ಗುಜರಾತಿನ ಪ್ರವಾಸವನ್ನು ಮುಗಿಸಿ ಚೆನ್ನೈಗೆ ತೆರಳಿದರು.





## ಆಶ್ರಮ ನಿರ್ವಹಣೆ ಕಾರ್ಯಕ್ರಮ

ಆಗಸ್ಟ್ 20 ರಿಂದ 24 ರವರೆಗಿನ 5 ದಿನಗಳ ಕಾರ್ಯಕ್ರಮವನ್ನು, ಸುಮಾರು 45 ಮಂದಿ ಅಭ್ಯಾಸಿಗಳಿಗಾಗಿ ನಡೆಸಲಾಯಿತು. ಇದರಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಆಶ್ರಮದ ವ್ಯವಸ್ಥಾಪಕರು, ಆಕಾಂಕ್ಷಿ ಸ್ವಯಂ ಸೇವಕರು ಹಾಗು ಕೇಂದ್ರದ ಮುಖ್ಯಸ್ಥರು ಭಾಗವಹಿಸಿದ್ದರು. ವೃತ್ತಿಪರ ಜಾಡಿನಲ್ಲಿ ಆಶ್ರಮಗಳನ್ನು ನಿರ್ವಹಿಸುವ ಗುರುಗಳ ಸೂಚನೆಯು ಈ ಕಾರ್ಯಕ್ರಮಕ್ಕೆ ಪ್ರೇರೇಪಣೆ ನೀಡಿತು. ಪ್ರತಿದಿನದ ಕಾರ್ಯಕ್ರಮಕ್ಕೆ ಒಂದೊಂದು ವಿಷಯವನ್ನು ನಿಗದಿ ಪಡಿಸಲಾಗಿತ್ತು – ನಮ್ಮ ಆಶ್ರಮಗಳಿಗೆ ದೂರದೃಷ್ಟಿಯ ಒಂದು ಕಲ್ಪನೆ, ಒಂದು ಆಶ್ರಮವನ್ನು ಪರಿಣಾಮಕಾರಿಯಾಗಿ ಬಳಸುವ ಬಗ್ಗೆ ಚಿಂತನೆ, ಆಧ್ಯಾತ್ಮಿಕತೆಯನ್ನು ಅರಸಿ ಬರುವವರಿಗೆ ಆಶ್ರಮಗಳ ಸೂಕ್ತ ಆಯೋಜನೆ, ಆಶ್ರಮಗಳ ಆಡಳಿತ ನಿರ್ವಹಣೆ, ಆಶ್ರಮಗಳಲ್ಲಿ ಕರ್ತವ್ಯ ಪಾಲನೆಯ ಜೊತೆಗೆ ಪರಸ್ಪರ ನಂಬಿಕೆ, ಗೌರವಗಳ ಮೃದು ಧೋರಣೆ ಆಧರಿಸಿದ ಸಂಸ್ಕೃತಿಯ ರಚನೆ. ಕಾರ್ಯಕ್ರಮಗಳಲ್ಲಿ ಸತ್ಸಂಗಗಳು, ಉಪನ್ಯಾಸಗಳು, ನಿರೂಪಣೆಗಳು, ಗುರುಗಳ ವೀಡಿಯೊ ಪ್ರದರ್ಶನ, ಗುಂಪಿನಲ್ಲಿ ಚರ್ಚೆಗಳು ಇದ್ದವು; ಅಲ್ಲದೆ ಇದು ಬಹು ಮುಖ್ಯವಾಗಿ ಮಣಪ್ಪಾಕ್ಕಮ್ ಆಶ್ರಮದಲ್ಲಿನ 32 ವಿಭಾಗಗಳಿಗೆ ನೀಡಿದ ಭೇಟಿ ಸಹ ಒಳಗೊಂಡಿತ್ತು. ಎರಡನೆ ದಿನ ಸೋ. ಕಮಲೇಶ್‌ರವರು ಆಶ್ರಮದಲ್ಲಿ ಸ್ವಾಗತಾರ್ಹವೆನಿಸುವ ಸಂಭಾವ್ಯ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, ಪ್ರೇಮ ತುಂಬಿದ ವಾತಾವರಣವನ್ನು ನಾವೆಲ್ಲರೂ ಪ್ರಯತ್ನಪೂರ್ವಕವಾಗಿ ಸೃಷ್ಟಿಸುವ ಬಗ್ಗೆ ತಮ್ಮ ಚಿಂತನೆಯನ್ನು ಹಂಚಿಕೊಂಡರು. ಕಡೆಯ ಎರಡು ದಿನಗಳಲ್ಲಿ ತಮ್ಮ ಅಸ್ವಸ್ಥತೆಯ ನಡುವೆಯೂ ಅವರು ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಡೆಯ ದಿನದಂದು ಅವರು ಆಶ್ರಮದ ನಿರ್ವಹಣೆಯು ನಿಜವಾಗಿಯೂ ಪ್ರತಿಯೊಬ್ಬ ಅಭ್ಯಾಸಿಯ ಆಂತರಿಕ ನಿರ್ವಹಣೆಯೊಂದಿಗೆ ಪ್ರಾರಂಭವಾಗುತ್ತದೆ ಹಾಗು ಪ್ರತಿಯೊಬ್ಬರೂ ತಮ್ಮ ತಮ್ಮ ಹೃದಯವನ್ನೇ ಆಶ್ರಮವನ್ನಾಗಿಸಬೇಕೆಂದು ಎಂದು ಒತ್ತಿ ಹೇಳಿದರು. ಆಶ್ರಮಗಳ ಪೋಷಣೆ ಸಹಜಮಾರ್ಗದ ಸಂಪೂರ್ಣತೆಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಿದರು.



## ಹೊಸ ಕೇಂದ್ರ – ಪಾಚೋರ್, ಮಧ್ಯಪ್ರದೇಶ

ಅಕ್ಟೋಬರ್ 2 ರಂದು, ರಾಜ್‌ಗಢ ಜಿಲ್ಲೆಯ ಪಾಚೋರ್‌ನಲ್ಲಿ, ಪಾಚೋರ್ ಮತ್ತು ಹತ್ತಿರದ ಹಳ್ಳಿಗಳ ಸುಮಾರು 150 ಮಂದಿ ಆಕಾಂಕ್ಷಿಗಳಿಗೆ ಒಂದು ಮುಕ್ತ ಸಭೆಯನ್ನು ನಡೆಸಲಾಯಿತು. ಸೋ. ರುಚಿ ಶ್ರೀವಾಸ್ತವರ ಪರಿಚಯ ಭಾಷಣದ ನಂತರ ಸೋ. ಪ್ರಭಾಕರದಾಸ್‌ರವರು ಆಧ್ಯಾತ್ಮಿಕತೆಯ ಅವಶ್ಯಕತೆ, ಸಹಜಮಾರ್ಗದ ಗುರುಪರಂಪರೆ ಮತ್ತು ಮಿಷನ್ನಿನ ಸೇವೆಗಳ ಬಗ್ಗೆ ಮಾತನಾಡಿದರು, ಸೋ. ಸಂಗೀತ ದಾಸ್‌ರವರು ಸಾಧನೆಯ ವಿವಿಧ ಅಂಗಗಳು ಮತ್ತು ನಮ್ಮ ದೈನಂದಿನ ಜೀವನದ ಮೇಲೆ ಅವುಗಳ ಪ್ರಭಾವದ ಬಗ್ಗೆ ತಿಳಿಸಿಕೊಟ್ಟರು. ಮುಂದುವರಿದ ಭಾಗವಾಗಿ ಒಂದು ಪರಸ್ಪರ ಪ್ರತಿಕ್ರಿಯಾತ್ಮಕ ಅನೌಪಚಾರಿಕ ಸಭೆ ನಡೆಯಿತು. ನಂತರ 25 ಮಂದಿ ಆಕಾಂಕ್ಷಿಗಳು ಸಾಧನೆಯನ್ನು ಪ್ರಾರಂಭ ಮಾಡುವ ಬಗ್ಗೆ ತಮ್ಮ ಇಂಗಿತವನ್ನು ತೋರಿದರು. ಅವರಿಗೆ ತಮ್ಮ ಪಾತ್ರ ಮತ್ತು ಸಾಧನೆಯ ಬಗೆಗಿನ ಬಾಧ್ಯತೆಯ ಬಗ್ಗೆ ತಿಳಿಸಿಕೊಡಲಾಯಿತು. ಅವರಲ್ಲಿ 10 ಮಂದಿ ಕೂಡಲೇ ಹಾಗು ಉಳಿದವರು ಮರುವಾರ ಬೈಠಕ್ ತೆಗೆದುಕೊಂಡರು. ಹೀಗಾಗಿ ಮಧ್ಯಪ್ರದೇಶದ ಈ ಭಾಗದಲ್ಲಿ ಒಂದು ಹೊಸ ಕೇಂದ್ರ ಬಹು ಸ್ವಾಭಾವಿಕವಾಗಿ ತೆರೆದುಕೊಂಡಿತು.

## ಪ್ರಾದೇಶಿಕ ಆಶ್ರಮ, ಕೊಲಕಲೂರು, ಆಂಧ್ರಪ್ರದೇಶ

ವಿಜಯವಾಡ, ಗುಂಟೂರು, ತೆನಾಲಿ ಮತ್ತು ಮಂಗಳಗಿರಿಯ ಅಭ್ಯಾಸಿಗಳ ಆಧ್ಯಾತ್ಮಿಕತೆಯ ಅವಶ್ಯಕತೆಗಳ ಪೂರೈಕೆಗಾಗಿ, ಖಾಜಿಪೇಟೆಯ ಎಂ.ಜಿ. ಸಹೋದರರ ಸ್ಥಿರಾಸ್ತಿಯಿಂದ ಸುಮಾರು 50 ಎಕರೆ ಜಮೀನನ್ನು ಪಡೆದುಕೊಳ್ಳಲಾಯಿತು. ಅದರಲ್ಲಿ 18.75 ಎಕರೆ ಜಮೀನನ್ನು ಆಶ್ರಮಕ್ಕಾಗಿ ಹಾಗು ಉಳಿದ ಜಮೀನನ್ನು ಅಭ್ಯಾಸಿಗಳ ವಸತಿ ವಲಯವಾಗಿ ಗುರುತಿಸಲಾಗಿದೆ.

ಗುರುಗಳ ಆಶೀರ್ವಾದಗಳೊಂದಿಗೆ ಫೆಬ್ರುವರಿ 2, 2012 ರಂದು ಸೋ. ಮಧು ಕೊತ್ತಪಲ್ಲಿ (ವಲಯಮುಖ್ಯಸ್ಥರು) ಅವರಿಂದ ಶಂಕುಸ್ಥಾಪನೆ ನಡೆಯಿತು. ಸೆಪ್ಟೆಂಬರ್ 8 ರಂದು ಗುರುಗಳು ನೇರ ಅಂತರ್ಜಾಲ ಪ್ರಸಾರದ ಮೂಲಕ ಪ್ರಾರಂಭೋತ್ಸವವನ್ನು ನೆರವೇರಿಸಿ ಆಶ್ರಮವನ್ನು ಪೂಜ್ಯ ಬಾಬೂಜಿಯವರಿಗೆ ಅರ್ಪಣೆ ಮಾಡಿದರು. ಗುರುಗಳು 'ಆಶ್ರಮಗಳನ್ನು ಉಪಯೋಗಿಸಿಕೊಳ್ಳಬೇಕು ಮತ್ತು ಅವು ಮಕ್ಕಳಿಲ್ಲದ ಶಾಲೆಗಳಂತಾಗಬಾರದು' ಎಂಬ ಪ್ರಸ್ತಾಪ ಮಾಡಿದರು. ಕೊಲಕಲೂರು ಅಭ್ಯಾಸಿಗಳು ಈ ಸಂದರ್ಭವನ್ನು ತುಂಬು ಹೃದಯದಿಂದ ಆಚರಿಸಿದರು. ಈಗ ಸತ್ಸಂಗಗಳು ಮತ್ತು ಪೂರ್ಣದಿನದ ಕಾರ್ಯಕ್ರಮಗಳನ್ನು ನಿಯುತವಾಗಿ ನಡೆಸಲಾಗುತ್ತಿದೆ.

## ಯುವಜನರ ಕಾರ್ಯಕ್ರಮಗಳು,



### ಅಹಮದ್ ನಗರ, ಮಹಾರಾಷ್ಟ್ರ

22 ಮಂದಿ ಯುವ ಅಭ್ಯಾಸಿಗಳು ಅಕ್ಟೋಬರ್ 6 ರಂದು, ಸೋದರಿಯರು ತಯಾರಿಸಿದ ಭರ್ಜರಿ ಭೋಜನವನ್ನು ಸವಿದು, 'ಎಫರ್ಟ್ಸ್ ಪ್ಲಾನೆಟೇರಿಯಂ'ಗೆ ಭೇಟಿ ನೀಡಿದರು. ತಾರಾಲಯಕ್ಕೆ ಬಂದು ನೋಂದಣಿಸಿದ ತರುವಾಯ ಪರಿಚಯದ ಸುತ್ತು, ತದನಂತರ ಮಿಷನ್ನಿನ ಸಾಹಿತ್ಯದಿಂದ ಆಯ್ದ ಶಬ್ದಗಳ ಮೂಲಕ ಪದಬಂಧಗಳ ಸಮಸ್ಯೆಯಾಟದ ಸ್ಪರ್ಧೆಯನ್ನು ಮೂಕಾಭಿನಯದ ಮೂಲಕ ನಡೆಸಲಾಯಿತು. ಒಂದು ವಿಚಾರವನ್ನು ಮಾತುಗಳಿಲ್ಲದೆಯೇ ಕೇವಲ ಹೃದಯದ ಮೂಲಕ ಹೇಗೆ ವ್ಯಕ್ತಪಡಿಸಬಹುದು ಎಂಬುದಕ್ಕೆ ಈ ಆಟ ಒಂದು ಉತ್ತಮ ಉದಾಹರಣೆಯಾಯಿತು. ಇದರ ನಂತರ ತಾರಾಲಯದಲ್ಲಿ ನಿಯತ ಕಾರ್ಯಕ್ರಮಗಳ ಮೇರೆಗೆ, ಆಕಾಶಗಂಗೆ, ಗ್ರಹಗಳು ಮತ್ತು ನಕ್ಷತ್ರಗಳ ಬಗ್ಗೆ ದೀರ್ಘವಾಗಿ ನೀಡಿದ ವಿವರಣೆಗಳು ಉತ್ತಮ ಶಿಕ್ಷಣವಾಗಿತ್ತು. ಈ ಲಘು ಪ್ರವಾಸವು ಅಭ್ಯಾಸಿಗಳಲ್ಲಿ ಭ್ರಾತೃತ್ವದ ಬೆಸುಗೆಯನ್ನು ವೃದ್ಧಿಸುವಲ್ಲಿ ಸಹಕಾರಿಯಾಯಿತು.

### ಭಿಲ್ವಾರ, ರಾಜಾಸ್ಥಾನ

ಪ್ರತಿ ತಿಂಗಳ ಯುವ ಕಾರ್ಯಕ್ರಮದ ಅಂಗವಾಗಿ ಆಗಸ್ಟ್ 25 ರಂದು 12 ಮಂದಿ ಯುವಕರು ಹಾಗು ಇಬ್ಬರು ಮಕ್ಕಳು ಹರ್ನಿ ಮಹಾದೇವ್‌ಗೆ ವಿಹಾರಕ್ಕೆಂದು ಹೊರಟರು. ಅಭ್ಯಾಸಿಗಳು ತಾವು ಸಹಜ ಮಾರ್ಗದ ಅಭ್ಯಾಸವನ್ನು ಹೇಗೆ ಪ್ರಾರಂಭ ಮಾಡಿದೆವು ಹಾಗು ತಮ್ಮ ಗುರಿ ಏನಾಗಿತ್ತೆಂಬುದನ್ನು ಕುರಿತು ತಮ್ಮ ಅನುಭವವಗಳನ್ನು ಹಂಚಿಕೊಂಡರು. ಇದರಿಂದ ಅವರಲ್ಲಿ ಅನೇಕರಿಗೆ ನಿಜವಾದ ಗುರಿಯ ಬಗೆಗೆ ಅರಿವಿರಲಿಲ್ಲವೆಂದು ತಿಳಿದುಬಂತು. ಮಿಷನ್ನಿನ ಸಾಹಿತ್ಯದಿಂದ ಆಯ್ದ ಪುಟಗಳನ್ನು ಓದಲಾಯಿತು. ವಿಷಯಗಳ ಬಗ್ಗೆ ಇನ್ನೂ ಹೆಚ್ಚಿನ ಒತ್ತು ನೀಡುವ ಅವಶ್ಯಕತೆಯನ್ನು ಮನಗಂಡು ಪ್ರತಿ ಭಾನುವಾರ ಸತ್ಸಂಗದ ನಂತರ ಎಲ್ಲ ಯುವ ಅಭ್ಯಾಸಿಗಳು ಧ್ಯಾನ ಮಂದಿರದಲ್ಲಿ ಉಳಿದು ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.





### ವಿಶ್ವ ಯುವ ದಿನಾಚರಣೆ – ಜಾಲತಾಣ ಸಮಾವೇಶ

ಶ್ರೀ ರಾಮಚಂದ್ರ ಮಿಷನ್ ಡಿಸೆಂಬರ್ 12, 2005 ರಂದು ವಿಶ್ವ ಸಂಸ್ಥೆಯ ಸಾರ್ವಜನಿಕ ಮಾಹಿತಿ ಸಂಸ್ಥೆಯ ಸಹಯೋಗದೊಂದಿಗೆ ತನ್ನನ್ನು ಒಂದು ಸರ್ಕಾರೇತರ ಸಂಸ್ಥೆಯೆಂದು ಕೈ ಜೋಡಿಸಿತು. ಇದರ ಮೂಲ ಉದ್ದೇಶ ಜಾತಿ, ವರ್ಣ, ಪಂಥ, ಧರ್ಮ, ರಾಷ್ಟ್ರೀಯತೆ ಮತ್ತು ಲಿಂಗಭೇದವನ್ನು ಮೀರಿದ ವಿಶ್ವ ಭ್ರಾತೃತ್ವ ಮತ್ತು ಪರಸ್ಪರ ಪ್ರೇಮವನ್ನು ಪೋಷಿಸುವುದೇ ಆಗಿದೆ.

'ವಿಶ್ವ ಪ್ರಾರ್ಥನೆ – ಪರಿವರ್ತನೆಗಾಗಿ ಪ್ರೇಮವೆಂಬ ಇಂಧನ' ಎಂಬ ವಿಷಯದ ಬಗ್ಗೆ ಜಾಲತಾಣ ಸಮಾವೇಶವನ್ನು ವಿಶ್ವ ಯುವದಿನದ ಉತ್ಸವದ ಆಚರಣೆಯ ಅಂಗವಾಗಿ ಆಗಸ್ಟ್ 17 ರಂದು ನಡೆಸಲಾಯಿತು. ಸುಮಾರು 4649 ಅಭ್ಯರ್ಥಿಗಳು ವಿಶ್ವದ ಎಲ್ಲಾ ಕಾಲಾವಧಿಯ ವಲಯಗಳಿಂದ ಭಾಗವಹಿಸಿದ್ದರು. ಬ್ರೆಜಿಲ್‌ನ ಸವೋ ಪೌಲೊದ ಸೋ. ಆಂಡ್ರೆ ಬಾರೆಟೊರವರ ಪ್ರಸ್ತಾವನೆಯೊಂದಿಗೆ ಇದು ಪ್ರಾರಂಭವಾಯಿತು. ನಂತರ ಗುರುಗಳು ಯುವಕರನ್ನು ಕುರಿತು ಮಾಡಿದ ಒಂದು ಚಿಕ್ಕ ಭಾಷಣವನ್ನು ಬಿತ್ತರಿಸಲಾಯಿತು. ಪ್ಯಾರಿಸ್‌ನ ಸೋ. ಏಕ್ತಾ ಬೌಡರ್ಲಿಕ್ ಅವರು ಶ್ರೀರಾಮಚಂದ್ರ ಮಿಷನ್ ಮತ್ತು ವಿಶ್ವ ಸಂಸ್ಥೆಯ ಸಾರ್ವಜನಿಕ ಮಾಹಿತಿ ಸಂಸ್ಥೆಯ ನಡುವಿನ ಸಹಯೋಗದ ಬಗ್ಗೆ ಒಂದು ನಿರೂಪಣೆಯನ್ನು ನಡೆಸಿಕೊಟ್ಟರು. ಸೋ. ರಿಷಭ್ ಕೊಠಾರಿ ಯವರು ದಿನಾಂಕ 17.11.1999 ರಂದು ಬಾಬೂಜಿ ಮಹಾರಾಜ್‌ರವರು ನೀಡಿದ ದಿವ್ಯಲೋಕದ ಪಿಸುಮಾತುಗಳ ಸಂದೇಶವನ್ನು ಓದಿದರು. ನಂತರ ಸಮಾವೇಶದ ವಸ್ತು ವಿಷಯದ ಬಗ್ಗೆ ಮಾತನಾಡಿದರು. ಮುಖ್ಯ ಭಾಷಣ ಮಾಡಿದ ನಂತರ ಸೋ. ರಿಷಭ್ ಮತ್ತು ಸೋ. ಏಕ್ತಾರವರು ಅಭ್ಯಾಸಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದರು. ಜಾಲತಾಣ ಸಮಾವೇಶವು ಯುವಜನತೆಗೆ ತಮ್ಮ ಅನುಭವ ಮತ್ತು ಎದುರಿಸುತ್ತಿರುವ ಸವಾಲುಗಳನ್ನು ಹಂಚಿಕೊಳ್ಳಲು ಒಂದು ಉತ್ತಮ ವೇದಿಕೆಯನ್ನು ನಿರ್ಮಿಸಿತ್ತು. ಮಣಪ್ಪಾಕ್ಕಂನ ಲಾಲಾಜಿ ಸ್ಮಾರಕ ಶಾಲೆಗಳಿಂದ ಆಗಮಿಸಿದ್ದ ಸುಮಾರು 150 ವಿದ್ಯಾರ್ಥಿಗಳೂ ಸೇರಿದಂತೆ ಒಟ್ಟು 200 ಅಭ್ಯರ್ಥಿಗಳು ಪಾಲ್ಗೊಂಡಿದ್ದರು.

ಜಾಲತಾಣ ಸಮಾವೇಶದ ನಂತರದ ವಿಶ್ವ ಪ್ರಾರ್ಥನೆಯು ಹೃದಯಸ್ಪರ್ಶಿಯಾಗಿದ್ದು, ಸಮಾವೇಶದ ಕೊನೆಗೆ ಪ್ರಾಯೋಗಿಕ ಅಂಶವಾಗಿ ಹೊರಹೊಮ್ಮಿತು. ವಿಶ್ವಾದಾದ್ಯಂತ ವಿಭಿನ್ನ ಸಂಸ್ಕೃತಿಗಳು ಪ್ರೇಮದಿಂದ ಪರಿವರ್ತನೆ ತರುವಲ್ಲಿ ಪ್ರಾರ್ಥನೆಯನ್ನು ಒಂದು ಮುಖ್ಯ ಸಾಧನವನ್ನಾಗಿ ಅಂಗೀಕರಿಸಿವೆ. ಜಾಲತಾಣ ಸಮಾವೇಶದ ನಂತರ ನಾನಾ ಕೇಂದ್ರಗಳು ಮತ್ತು ಆಶ್ರಮಗಳಲ್ಲಿ ಪ್ರಾರ್ಥನೆ ಮಾಡಿದ ಅನೇಕ ಅಭ್ಯಾಸಿಗಳು, ಉತ್ತಮ ಪ್ರಪಂಚವೊಂದನ್ನು ಸೃಷ್ಟಿಮಾಡುವ ತಮ್ಮ ಉದ್ದೇಶಕ್ಕೆ ಉತ್ತೇಜನ ಮತ್ತು ಸಂಪರ್ಕದ ಭಾವನೆಗಳನ್ನು ಅನುಭವಿಸಿದ್ದಾಗಿ ವರದಿ ಮಾಡಿದ್ದಾರೆ.

## ಪ್ರಶಿಕ್ಷಕರ ಸಮ್ಮೇಳನ






### ತಿರುಚಿ, ತಮಿಳುನಾಡು

ಸೆಪ್ಟೆಂಬರ್ 21ರಂದು ತಿರುಚಿಯಲ್ಲಿ, ವಲಯ ನಿರ್ವಾಹಕರಾದ ಸೋ. ಮುರುಗನ್ ಮತ್ತು ಭಾರತದ ಉಸ್ತುವಾರಿ ನಿರ್ವಾಹಕರಾದ ಸೋ. ರಾಜೇಶ್ ರಾಠೋಡ್‌ರವರೂ ಸೇರಿದಂತೆ ತಮಿಳುನಾಡಿನ ಅನೇಕ ಭಾಗಗಳಿಂದ(ವಲಯ 2ಎ) ಪ್ರಶಿಕ್ಷಕರು ಸೇರಿದ್ದರು. ಬೆಳಿಗ್ಗೆ 7.30ಕ್ಕೆ ಸತ್ಸಂಗದಿಂದ ಪ್ರಾರಂಭಗೊಂಡ ದಿನದಲ್ಲಿ ನಂತರ, ಗುರುಗಳು ಜನವರಿ 23, 2013ರಂದು ತಿರುಚಿಯಲ್ಲಿ 'ಪ್ರಶಿಕ್ಷಕರ ಅನುಭವವನ್ನು ಗಾಢಗೊಳಿಸುವುದು' ಕಾರ್ಯಕ್ರಮದಲ್ಲಿ ನೀಡಿದ 'ಬೈಠಕನ್ನು ನೀಡುವುದು ಹೇಗೆ' ಎನ್ನುವ ಉಪನ್ಯಾಸದ ವಿಡಿಯೋವನ್ನು ತೋರಿಸಲಾಯಿತು. ಆನಂತರ, 'ನಿಮ್ಮ ಕೇಂದ್ರದಲ್ಲಿ ಅತ್ಯುತ್ತಮ ಅಂಶ ಯಾವುದೆಂದು ನಿಮಗನಿಸುತ್ತದೆ?' ಮತ್ತು 'ಕೇಂದ್ರದಲ್ಲಿ ಬದಲಾವಣೆ ತಂದಿರಬಹುದಾದ ಕಳೆದ ಒಂದು ವರ್ಷದಲ್ಲಿ ಅನುಷ್ಠಾನಕ್ಕೆ ತಂದ ವಿಷಯಗಳಾವುವು?' ಎಂಬ ವಿಷಯಗಳ ಚರ್ಚೆ ನಡೆಯಿತು. ಎಲ್ಲರೂ ತಮ್ಮ ಅನುಭವಗಳನ್ನು ಹಂಚಿಕೊಂಡರು. ಈ ಚರ್ಚೆಯು ಒಳನೋಟ ಮತ್ತು ಇತರ ಕೇಂದ್ರಗಳಿಂದ ಕಲಿಯುವ ಅವಕಾಶ ಒದಗಿಸಿದ್ದು ಫಲದಾಯಕವಾಗಿದ್ದಿತು. ನಂತರ ಸೋ ಮುರುಗನ್‌ರವರು ವಲಯ 2'ಎ'ಯ ಚಟುವಟಿಕೆಗಳ ಸಕಲ ಮಾಹಿತಿ ಒದಗಿಸಿ, ಉಪಸ್ಥಿತರ ಮೇಲಿಟ್ಟ ನಿರೀಕ್ಷೆಗಳಾವುವು ಎಂಬುದನ್ನು ಹೇಳಿದರು. ಅಪರಾಹ್ನದಂದು ಕಾಳಜಿಯುತ ವಿಷಯಗಳು ಮತ್ತು ಅವಕಾಶಗಳ ಬಗ್ಗೆ ಚರ್ಚಿಸಲಾಯಿತು. ಸೋ ರಾಜೇಶ್‌ರವರು ಅನೇಕ ವಿಷಯಗಳ ಸ್ಪಷ್ಟೀಕರಣ ನೀಡಿದರು. ಗುರುಗಳ, 'ಉತ್ತಮ ಪ್ರಶಿಕ್ಷಕರಾಗುವುದು ಹೇಗೆ' ಎಂಬ ವಿಡಿಯೋವನ್ನು ಪ್ರದರ್ಶಿಸಲಾಯಿತು. ಸಂಜೆ 6ಗಂಟೆಯ ಸತ್ಸಂಗದೊಡನೆ ಸಭೆಯು ಮುಕ್ತಾಯಗೊಂಡಿತು.

### ಲಖನೌ, ಉತ್ತರ ಪ್ರದೇಶ

ಸೆಪ್ಟೆಂಬರ್ 28–29ರಂದು, ಮಧ್ಯ ಉ.ಪ್ರ. ವಲಯದ ನೂರು ಪ್ರಶಿಕ್ಷಕರಿಗಾಗಿ ಲಖನೌದ ಬಾಬೂಜಿ ಮೆಮೋರಿಯಲ್ ಆಶ್ರಮವು ಎರಡು ದಿನದ ವಲಯ ಮಟ್ಟದ ಸಭೆಯನ್ನು ಹಮ್ಮಿಕೊಂಡಿದ್ದು, ಸೋ. ಯು.ಎಸ್.ಬಾಜಪೇಯಿರವರು (ಕಾರ್ಯದರ್ಶಿ) ಉಪಸ್ಥಿತರಿದ್ದರು. ವಲಯ ನಿರ್ವಾಹಕರಾದ ಸೋ. ಅಶೋಕ್ ಗರ್ಗ್‌ರವರು ಪ್ರಶಿಕ್ಷಕರನ್ನು ಸ್ವಾಗತಿಸುತ್ತಾ ಈ ಕಾರ್ಯಾಗಾರದಿಂದ ಲಾಭ ಪಡೆಯಲು ಹೃದಯ ಮತ್ತು ಮನಸ್ಸನ್ನು ಮುಕ್ತವಾಗಿಟ್ಟುಕೊಳ್ಳುವುದು ಅಗತ್ಯವೆಂದು ಹೇಳಿದರು. ಗುರುಗಳ ಮೂರು ಉಪನ್ಯಾಸಗಳು – 'ಪರಿಪೂರ್ಣ ಪ್ರಶಿಕ್ಷಕರಾಗಿ', 'ಬೈಠಕನ್ನು ನೀಡುವುದು ಹೇಗೆ' ಮತ್ತು 'ಶಿಸ್ತಿನ ಅಗತ್ಯ'ಗಳನ್ನು ಪ್ರದರ್ಶಿಸಲಾಯಿತು. ಸೋ. ನ್ಯಾಯಾಧೀಶ ಆರ್.ಆರ್.ಕೆ.ತ್ರಿವೇದಿಯವರು 'ಪ್ರಶಿಕ್ಷಕರ ಪಾತ್ರ'ದ ಬಗ್ಗೆ ಮಾತನಾಡಿದರು, ಸೋ ಕೆ.ಕೆ. ಸಕ್ಸೇನಾರವರು 'ಪ್ರಶಿಕ್ಷಕರ ಕೈಪಿಡಿ'ಯ ಅಂಶಗಳನ್ನು ಪ್ರಸ್ತುತಪಡಿಸಿದರು, ಸೋ ಆಶಿಷ್ ಸಿಂಗ್‌ರವರು ಪ್ರೇಮದಿಂದ ಕೆಲಸ ಮಾಡುವ ಪ್ರಾಮಾಣಿಕ ಮತ್ತು ಶ್ರದ್ಧೆಯುಳ್ಳ ಅಭ್ಯಾಸಿಗಳಾಗುವಂತೆ ಪ್ರಶಿಕ್ಷಕರನ್ನು ಹುರಿದುಂಬಿಸಿದರು, ಸೋ ಪ್ರಿಯದರ್ಶಿನಿಯವರು 'ಪ್ರಶಿಕ್ಷಕರ ಅನುಭವವನು ಗಾಢಗೊಳಿಸುವಿಕೆ' ಬಗ್ಗೆ ಮಾತನಾಡಿದರು. ಸೋ. ಒ.ಪಿ.ಗುಲಿಯ ಮತ್ತು ಸೋ ಆರ್.ಎಸ್.ಎಲ್. ಶ್ರೀವಾಸ್ತವರವರು ಕೇಂದ್ರದ ಇತಿಹಾಸದ ಬಗ್ಗೆ ಕಾರ್ಯಶೀಲರಾಗುವುದರ ಬಗ್ಗೆ ಮಾತನಾಡಿದರು. ಸೋ ಅಶೋಕ್ ಗರ್ಗ್‌ರವರು ತಮ್ಮ ಕೇಂದ್ರಗಳ ಭೇಟಿಯ ವರದಿಯನ್ನೊಪ್ಪಿಸಿದರು. ಸೋ ಅಶೋಕ್ ಗರ್ಗ್‌ರವರಿಗೆ ಧನ್ಯವಾದಗಳನ್ನರ್ಪಿಸುತ್ತಾ ಸೋ ಯು.ಎಸ್. ಬಾಜಪೇಯಿರವರು ಕಾರ್ಯಾಗಾರವನ್ನು ಮುಕ್ತಾಯಗೊಳಿಸಿದರು. ಪರಿಪೂರ್ಣ ಪ್ರಶಿಕ್ಷಕರಾಗುವ ಪ್ರತಿಜ್ಞೆಯೊಂದಿಗೆ ಎಲ್ಲ ಪ್ರಶಿಕ್ಷಕರು ತಮ್ಮ ತಮ್ಮ ಕೇಂದ್ರಗಳಿಗೆ ಮರಳಿದರು.

### ಮಂಗಳೂರು, ಕರ್ನಾಟಕ

ಸೆಪ್ಟೆಂಬರ್ 1ರಂದು ಸೋ ಮೋಹನ್‌ದಾಸ್‌ರವರು 'ನಮ್ಮ ಸ್ಥಿತಿಯನ್ನು ಅಭ್ಯಸಿಸುವುದು ಹೇಗೆ' ಎಂಬ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಅವರು ದಿನಚರಿ ಬರವಣಿಗೆಯ ಮೂಲಕ ಅರಿವು ಮತ್ತು ಸೂಕ್ಷ್ಮತೆಗಳನ್ನು ಬೆಳೆಸಿಕೊಳ್ಳುವ ಅಗತ್ಯದ ಬಗ್ಗೆ ಮಾತನಾಡಿದರು. ಸತ್ಸಂಗದ ಕಾಲದಲ್ಲಿ ಮತ್ತು ನಂತರ ಸಮಯ ಮತ್ತು ಸ್ಥಳಗಳ ಅರಿವು, ಗಾಢತೆ, ಮಗ್ನತೆ, ಶಾಂತಿ ಮತ್ತು ಸಮಾಧಾನಗಳನ್ನು ಅಭ್ಯಾಸಿಗಳು ಬರೆದಿಡಬೇಕೆಂದು ವಿವರಿಸಿದರು. ದಿನಚರಿ ಬರವಣಿಗೆಯು ನಮ್ಮನ್ನು ಶುದ್ಧೀಕರಿಸುವ ಮತ್ತು ನಮ್ಮ ಒಳಪ್ರಜ್ಞೆಯನ್ನು ಜಾಗೃತಗೊಳಿಸುವ ಉಪಕರಣವೆಂದು ಅವರು ಹೇಳಿದರು. ಪರಿಸ್ಥಿತಿ ಮತ್ತು ಅನುಭವಗಳು ಭಿನ್ನ ಮತ್ತು ಪರಿಸ್ಥಿತಿಯು ಅಸ್ತಿತ್ವದ ಸ್ಥಿತಿ ಎಂದು ಅವರು ಹೇಳಿದರು. 'ತವಕವನ್ನು ಬೆಳೆಸಿಕೊಳ್ಳುವ ಮಾರ್ಗ ಮತ್ತು ರೀತಿಗಳು' ಎಂಬ ವಿಷಯದ ಪ್ರತಿಸ್ಪಂದನ ಕಾರ್ಯಕ್ರಮವಿದ್ದಿತು. ಮೊದಲ ಮೂರು ಬೈಠಕುಗಳ ಮೊದಲು ಮತ್ತು ನಂತರದ ಅನುಭವಗಳನ್ನು ಅಭ್ಯಾಸಿಗಳು ಹೇಳಿಕೊಂಡರು. ಸೋ ಮೋಹನ್‌ದಾಸ್‌ರವರು ಸಾಧನೆಯಲ್ಲಿ ಯಾಂತ್ರಿಕವಾಗಿ ತೊಡಗದೆ, ಹೃದಯಾಂತರಾಳದಿಂದ ಮಾಡುವಂತೆ ಸಮಂಜಸ ಧೋರಣೆಯನ್ನು ಪಾಲಿಸುವ ಅವಶ್ಯಕತೆಯನ್ನು ವಿವರಿಸಿದರು. ತವಕವನ್ನು ಬೆಳೆಸಿಕೊಳ್ಳಲು ನಾವು ಸಾಧ್ಯವಾದಷ್ಟು ಬಾರಿ ಗುರುಗಳನ್ನು ಭೇಟಿಯಾಗಿ ಆಂತರಿಕ ಸಂಪರ್ಕ ಮತ್ತು ಸಂಬಂಧವನ್ನು ಕಾಯ್ದುಕೊಳ್ಳಬೇಕು.





## ಮನನ ಕಾರ್ಯಕ್ರಮ – ತಿಪಟೂರು, ಕರ್ನಾಟಕ

ಧರ್ಮಾಚರಣೆಗಳನ್ನು ದಾಟಿ, ಕೊರತೆಗಳನ್ನು ಜಯಿಸಿ, ಸಾಧನೆಯ ಬಗ್ಗೆ ಅರಿವು ಮೂಡಿಸಲು ಹಾಗು ವೈಯಕ್ತಿಕ ಚಾರಿತ್ರ್ಯ ವಿಕಸನದ ಆತ್ಮಪರೀಕ್ಷಣೆ ಮಾಡಿಕೊಳ್ಳಲು ಅಭ್ಯಾಸಿಗಳಿಗೆ ಸಹಾಯಕವಾಗುವಂತೆ ಸೆಪ್ಟೆಂಬರ್ 14 ಮತ್ತು 15ರಂದು ಕರ್ನಾಟಕದ ತಿಪಟೂರಿನಲ್ಲಿ ಸಾಧನೆಯ ಚಿಂತನಾ ಶಿಬಿರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸುಮಾರು ನಲವತ್ತು ಅಭ್ಯಾಸಿಗಳು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಿಂದ ಅಭ್ಯಾಸ ಮತ್ತು ಪದ್ಧತಿಯ ಬಗ್ಗೆ ಉತ್ತಮ ತಿಳಿವು ದೊರೆತಿದೆ ಎಂದು ಭಾಗಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದು ಅವರ ಅನಿಸಿಕೆಗಳು ಉತ್ತೇಜನಕಾರಿಯಾಗಿದ್ದವು. ಕಾರ್ಯಕ್ರಮವನ್ನು ಸೋ. ಬಿ. ಶ್ರೀನಿವಾಸ ಮತ್ತು ಸೋ ಡಾ.ಕೃಷ್ಣಮೂರ್ತಿಯವರು ನಡೆಸಿಕೊಟ್ಟರು.

## ತುಮ್‌ಕುಂಟ ಆಶ್ರಮ, ಹೈದರಾಬಾದ್

ಈ ವಲಯಾಶ್ರಮದಲ್ಲಿ ಸಾಮಾನ್ಯವಾಗಿ ಪ್ರತಿ ತಿಂಗಳ ಮೊದಲ ಶನಿವಾರದಂದು ವಿವಿಧ ಕೂಟಗಳು ನಡೆಯುತ್ತವೆ. ಅಕ್ಟೋಬರ್ 5ರಂದು ಈ ಕಾರ್ಯಕ್ರಮ ಪ್ರಾರಂಭವಾಗಿ ಎರಡು ವಸಂತಗಳು ಕಳೆದವು. ಸಭೆಗಳಲ್ಲಿ ಸಾಮಾನ್ಯವಾಗಿ ಗುರುಗಳ ವಿಡಿಯೋ ವೀಕ್ಷಣೆ, ಸಹಜಮಾರ್ಗದ ವಿವಿಧ ಅಂಶಗಳ ಚರ್ಚೆ, ಉಪನ್ಯಾಸಕರ ಪ್ರಸ್ತುತಿಗಳು, ವಿಸ್ಪರ್ಸ್ ಸಂದೇಶಗಳ ವಾಚನ ಅಥವಾ ಆಸಕ್ತಿಯುತ ಚಲನಚಿತ್ರ ವೀಕ್ಷಣೆ ನಡೆಯುತ್ತವೆ. ಗುರುಗಳನ್ನು ಭೇಟಿ ಮಾಡಿದವರು, ಕ್ರೆಸ್ಟ್, ರಿಟ್ರೀಟ್ ಕೇಂದ್ರಗಳಿಗೆ ಭೇಟಿ ನೀಡಿದವರು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಅಲ್ಲಿನ ವಾಸಿತ ಅಭ್ಯಾಸಿಗಳ ನಡುವೆ ಉತ್ತಮ ಸಂಬಂಧವನ್ನು ಬೆಳೆಸಿ, ಏಕತ್ರ ಭಾವನೆ ಮೂಡಿಸಲು ಈ ಕಾರ್ಯಕ್ರಮಗಳು ಸಫಲವಾಗಿವೆ. ಅಭ್ಯಾಸಿಗಳು ಈ ಕಾರ್ಯಕ್ರಮಗಳಲ್ಲಿ ಬಲು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ.



## ಕುಂಭಕೋಣಂ, ತಮಿಳುನಾಡು

ವಲಯ ನಿರ್ವಾಹಕ ಸೋ ಬಿ.ಎಸ್.ಮುರುಗನ್‌ರವರು ಮಿಷನ್ನಿನ ಸಾಹಿತ್ಯವನ್ನು ಓದುವಂತೆ ಉತ್ತೇಜನ ನೀಡಲು ಹಾಗು ವಿಕಾಸಕ್ಕೆ ಅವಕಾಶ ನೀಡಿ, ತಂಡದಲ್ಲಿ ಕಾರ್ಯ ಕೈಗೊಳ್ಳಲು 'ಸಾಹಿತ್ಯದಿಂದ ಕಲಿಕೆ' ಕಾರ್ಯಕ್ರಮವನ್ನು ಆಯೋಜಿಸಿದರು.

ಮೊದಲಬಾರಿ ಈ ಕಾರ್ಯಕ್ರಮವನ್ನು ತಿರುಚಿಯಲ್ಲಿ ಜುಲೈ 27ರಂದು ನಡೆಸಲಾಗಿದ್ದು, ಇಪ್ಪತ್ತೆರಡು ಕೇಂದ್ರಗಳಿಂದ ಸುಮಾರು ಅರವತ್ತು ಅಭ್ಯಾಸಿಗಳು ಪಾಲ್ಗೊಂಡರು. ವಲಯವನ್ನು 14 ಗುಂಪುಗಳನ್ನಾಗಿ ವಿಂಗಡಿಸಿದ್ದು, ಪ್ರತಿ ಗುಂಪು 5–6 ಕೇಂದ್ರಗಳು ಮತ್ತು ಒಬ್ಬ ಆಯೋಜಕರನ್ನು ಹೊಂದಿತ್ತು. ಕುಂಭಕೋಣಂ, ಕರೈಕಲ್, ತಿರುವರೂರು, ನಾಗಪಟ್ಟಣಂ, ಕುಡವಾಸಲ್ ಮತ್ತು ಮಯಿಲಾಡುತುರೈಗಳನ್ನು ಹೊಂದಿದ ಗುಂಪು–5ರ ಮೊದಲ ಸಭೆಯು ಕುಂಭಕೋಣಂನಲ್ಲಿ ಸೆಪ್ಟೆಂಬರ್ 8ರಂದು ನಡೆಯಿತು. ಇಪ್ಪತ್ಮೂರು ಅಭ್ಯಾಸಿಗಳು ಸತ್ಯೋದಯವನ್ನು ಓದಲು ತೆಗೆದುಕೊಂಡರು. ಭಾಗಿಗಳು ಪುಸ್ತಕದಿಂದ ಕಲಿಯಲು ಆಸಕ್ತಿ ತೋರಿದ್ದು, ಕಾರ್ಯಕ್ರಮವು ಅವರ ತಿಳಿವಿನ ಸುಧಾರಣೆಗೆ ಸಹಾಯಕವಾಯಿತು.

## ಅಂಜಾದ್, ಮಧ್ಯಪ್ರದೇಶ

ಸೆಪ್ಟೆಂಬರ್ 8ರಂದು ಅಂಜಾದ್‌ನಲ್ಲಿ, ಸಹಜಮಾರ್ಗ ಸಾಧನೆಯ ವಿವಿಧ ಅಂಶಗಳ ಮೇಲೆ ಆಧಾರಿತ ಕಾರ್ಯಕ್ರಮದೊಂದಿಗೆ 'ನಮ್ಮ ಸ್ಥಿತಿಯನ್ನು ಗಮನಿಸುವುದು ಮತ್ತು ಉಳಿಸಿಕೊಳ್ಳುವುದು' ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇಂದೋರಿನ ಸೋದರರಾದ ರಾಜೇಶ್, ಶೈಲೇಂದ್ರ ಮತ್ತು ನೀಲೇಶ್ ಶರ್ಮಾರವರು ಕಾರ್ಯಕ್ರಮವನ್ನು ಆಯೋಜಿಸಿದ್ದು, ಅಂಜಾದ್, ದವನ, ಶಿಕ್ರಿ ಮತ್ತು ಬದ್ವಾನಿಯ ನಲವತ್ತು ಅಭ್ಯಾಸಿಗಳು ಪಾಲ್ಗೊಂಡರು. ಗುರಿ ನಿಶ್ಚಯದ ಮಹತ್ವವನ್ನು ತಿಳಿಸಲಾಯಿತು. "ಪ್ರಸ್ತುತ ನಾನು ನನ್ನ ಧ್ಯಾನ ಮತ್ತು ಶುದ್ಧೀಕರಣವನ್ನು ಹೇಗೆ ಮಾಡುತ್ತಿದ್ದೇನೆ" ಎಂಬ ವಿಷಯದ ಆತ್ಮವಿಮರ್ಶೆಯ ನಂತರ ಗುರುಗಳು ನೀಡಿದ ಪದ್ಧತಿಯ ಪ್ರಸ್ತುತಿಯು ಅಭ್ಯಾಸಿಗಳಲ್ಲಿ ತಪ್ಪು ಕ್ರಮಗಳನ್ನು ಸರಿಪಡಿಸಿಕೊಳ್ಳಲು ಸಹಾಯಕವಾಯಿತು. ಸ್ಥಿತಿಯನ್ನು ಉಳಿಸಿಕೊಳ್ಳುವ ಮಹತ್ವದ ಬಗ್ಗೆ ಹೇಳುವಾಗ ಅಭ್ಯಾಸಿಗಳಿಗೆ ತಮ್ಮ ಸ್ಥಿತಿಯನ್ನು ಗಮನಿಸಿ ನಂತರ 15 ನಿಮಿಷದ ಧ್ಯಾನ ಮಾಡಿ, ನಂತರ ಮೌನವಾಗಿ ಕುಳಿತು ತಮ್ಮ ಸ್ಥಿತಿಯ ಬದಲಾವಣೆಯನ್ನು ಪುನಃ ಗಮನಿಸಿ ಅದನ್ನು ದಿನಚರಿಯಲ್ಲಿ ಬರೆಯಲು ಹೇಳಲಾಯಿತು. ಸೂಕ್ಷ್ಮತೆಯ ಮತ್ತು ಜಾಗರೂಕತೆಯ ಹೆಚ್ಚಳದ ಮಹತ್ವವನ್ನು ಎಲ್ಲರೂ ಪರಿಗಣಿಸಿದರು.

## ತುಣುಕುಗಳು



### ಕೊಲ್ಕಾತಾ

ಸೆಪ್ಟೆಂಬರ್ 7ರಂದು, ಲಜ್‌ಪತ್ ಬಾಲಿಕಾ ವಿದ್ಯಾಲಯದ ಐವತ್ತೆಂಟು ಹುಡುಗಿಯರು ನಾಲ್ಕು ಶಿಕ್ಷಕರು ಹಾಗು ಉಪಪ್ರಾಂಶುಪಾಲರೊಡನೆ ಕೊಲ್ಕಾತಾದ ಬಾಬೂಜಿ ಮೆಮೋರಿಯಲ್ ಆಶ್ರಮಕ್ಕೆ ಭೇಟಿ ನೀಡಿದರು. ಅವರಿಗೆ ಸಮಯ ನಿರ್ವಹಣೆ, ಮಾನವೀಯತೆ ಮತ್ತು ಕರುಣೆಯ ಬಗೆಗಿನ ವಿಬಿಎಸ್‌ಇ ಪ್ರಯೋಗಗಳನ್ನು ತೋರಿಸಲಾಯಿತು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮಿಷನ್ನಿನೊಡನೆ ಇಂತಹ ಸಂವಹನವನ್ನು ಇನ್ನೂ ಹೆಚ್ಚು ಬಯಸಿದರು. ಕೆಲವು ಶಿಕ್ಷಕರು ಸಾಧನೆಯನ್ನು ಪ್ರಾರಂಭಿಸಲು ಆಸಕ್ತಿ ತೋರಿದರು.

### ವಡೋದರ

ನವರಾತ್ರಿ ಹಬ್ಬದ ಅಂಗವಾಗಿ ಅಕ್ಟೋಬರ್ 13ರಂದು, ಸೋ ಬಿಟ್ಟು ಭಾಯಿರವರು ಮಕ್ಕಳ ಕೇಂದ್ರದ ಸ್ವಯಂಸೇವಕರ ಜೊತೆಗೂಡಿ 'ಗರ್ಬಾ' ನೃತ್ಯವನ್ನು ಆಯೋಜಿಸಿದ್ದರು. ಸತ್ಸಂಗದ ನಂತರ ವರ್ಣರಂಜಿತ ಗರ್ಬಾ ಉಡುಪಿನಲ್ಲಿ ಮಕ್ಕಳು ನೃತ್ಯ ಮಾಡಿದರು ಹಾಗು ಅವರ ಪೋಷಕರು ಮತ್ತು ಹಿರಿಯರೂ ಸಹ ಜೊತೆಗೂಡಿದರು. ಇದು ಸಂತೋಷದ ವಾತಾವರಣವನ್ನು ಸೃಷ್ಟಿಸಿತು.

### ಇಂದೋರ್, ಮಧ್ಯಪ್ರದೇಶ

ಆಗಸ್ಟ್ 31ರಂದು ಇಂದೋರ್ ಆಶ್ರಮದಲ್ಲಿ ಆರು ಅಭ್ಯಾಸಿಗಳು ಜೊತೆಗೂಡಿ, ಗುರುಗಳೊಡನೆ ಬಾಂಧವ್ಯದ ವೃದ್ಧಿಯ ಬಗ್ಗೆ ಚಿಂತನೆ ನಡೆಸಿದರು. ಮೆಸೇಜಸ್ ಯುನಿವರ್ಸಲ್ ಪುಸ್ತಕದ ಉಪನ್ಯಾಸದ ಸಾರಾಂಶವನ್ನು ಓದಲಾಯಿತು. ಅದು, ಗುರುಗಳನ್ನು ನಮ್ಮ ಆಧ್ಯಾತ್ಮಿಕ ಹೃದಯವನ್ನಾಗಿ ಪರಿಗಣಿಸಿ ಅವರನ್ನು ಆಂತರ್ಯದಲ್ಲಿರಿಸಿಕೊಳ್ಳುವ ಅಗತ್ಯದ ಕುರಿತಾಗಿದ್ದಿತು. ಅಭ್ಯಾಸಿಗಳು ಆತ್ಮವಿಮರ್ಶೆ ನಡೆಸಿ, ಅಭಿಪ್ರಾಯವನ್ನು ತಮ್ಮ ದಿನಚರಿಯಲ್ಲಿ ಬರೆದಿಟ್ಟುಕೊಂಡರು.

### ಕೊಲ್ಕಾತಾ

ಸೆಪ್ಟೆಂಬರ್ 22ರಂದು ಮಕ್ಕಳನ್ನು ವಯೋಮಾನಕ್ಕನುಗುಣವಾಗಿ ಪ್ರತ್ಯೇಕ ಗುಂಪುಗಳನ್ನಾಗಿ ಮಾಡಿ, ಪ್ರಾರ್ಥನಾ ವಾಚನ, ಪ್ರಾರ್ಥನೆ ಅಥವಾ ಹತ್ತು ನಿಯಮಗಳನ್ನು ನೆನಪಿಟ್ಟು ಬರೆಯುವುದು ಮುಂತಾದ ಚಟುವಟಿಕೆಗಳನ್ನು ನೀಡಲಾಗಿತ್ತು. ವಯಸ್ಕ ಮಕ್ಕಳು ಪ್ರೇಮ, ಶಿಸ್ತು ಮತ್ತು ಧ್ಯಾನ ಮುಂತಾದ ವಿಷಯಗಳ ಮೇಲೆ ಪ್ರಬಂಧ ಬರೆದರು. ಸುಮಾರು ಎಪ್ಪತ್ತು ಮಕ್ಕಳು ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು. ಇದರಿಂದ ಪ್ರಾರ್ಥನೆ ಮತ್ತು ಹತ್ತು ನಿಯಮಗಳನ್ನು ಕಲಿಯಲು ಮಕ್ಕಳು ಮತ್ತು ಪಾಲಕರು ಪ್ರೇರಿತಗೊಂಡರು.








### ಮೊರಾದಾಬಾದ್, ಉತ್ತರಪ್ರದೇಶ

ಸೆಪ್ಟೆಂಬರ್ 29ರಂದು ದಿನಚರಿ ದಾಖಲೆಯ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಮೂರು ಗುಂಪುಗಳಲ್ಲಿ ವಿಂಗಡಿಸಲಾದ ಇಪ್ಪತ್ತೆಂಟು ಅಭ್ಯಾಸಿಗಳಿಗಾಗಿ ಈ ಕಾರ್ಯಕ್ರಮವನ್ನು ನಾಲ್ಕು ಆಯ-ೋಜಕರು ನಡೆಸಿಕೊಟ್ಟರು. ಭಾಗಿಗಳಿಗೆ ಇದು ಉಲ್ಲಾಸದಾಯಕ ಅನುಭವ ತಂದುಕೊಟ್ಟಿದ್ದು, ನಮ್ಮ ಸ್ಥಿತಿಯ ಬಗ್ಗೆ ನಾವು ದಿನಚರಿಯಲ್ಲಿ ಬರೆದಾಗಲೆಲ್ಲ ಅದು ಗುರುಗಳಿಗೆ ತಿಳಿಯುತ್ತದೆ ಎಂದು ಹೆಚ್ಚಿನವರು ಅಭಿಪ್ರಾಯ ಪಟ್ಟರು. ಸಭೆಯು ಅಪರಾಹ್ನ 2.30ರ ತನಕ ನಡೆಯಿತು.

### ಚಿಖಲಿ, ಮಹಾರಾಷ್ಟ್ರ

ಅಕ್ಟೋಬರ್ 6ರಂದು ಸುಮಾರು ಅರವತ್ತೈದು ಅಭ್ಯಾಸಿಗಳಿಗಾಗಿ 'ನಿರಂತರ ಸ್ಮರಣೆ' ಆಧಾರಿತ ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಭ್ಯಾಸಿಗಳು ಸಿದ್ಧತೆಯೊಂದಿಗೆ ಬಂದು ಪ್ರಶ್ನೆಗಳನ್ನು ಕೇಳಿದರು, ಹಾಗಾಗಿ ಮಾಹಿತಿಪೂರ್ಣ ಚರ್ಚೆಯು ನಡೆಯಿತು. ಕೇಂದ್ರಪ್ರಮುಖರಾದ ಸೋ ಸಂಜಯ್ ಲಾಹೋಟಿಯವರು ಚರ್ಚೆಯನ್ನು ಮುಕ್ತಾಯಗೊಳಿಸಿದರು.



ಚಿಖಲಿ ಕೇಂದ್ರದಲ್ಲಿ ಕಳೆದ ಎರಡು ತಿಂಗಳುಗಳಿಂದ ಹೊಸ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮೂರನೆಯ ಭಾನುವಾರದಂದು, ಉಪಸ್ಥಿತ ಅಭ್ಯಾಸಿಗಳನ್ನು ಹತ್ತು ಗುಂಪುಗಳನ್ನಾಗಿ ವಿಂಗಡಿಸಲಾಗುತ್ತದೆ. ಪ್ರತಿ ಗುಂಪಿಗೂ ಒಂದು ಪುಸ್ತಕ ನೀಡಿ, ಅದರ ಎರಡು ಅಧ್ಯಾಯಗಳನ್ನು ಓದಲು ಹೇಳಲಾಗುತ್ತದೆ. ಭೋಜನ ವಿರಾಮದಲ್ಲಿ, ಸೋ ತುಳಸಿರಾಂರವರು ಆ ಅಧ್ಯಾಯಗಳಿಂದ ಹತ್ತು ಪ್ರಶ್ನೆಗಳನ್ನು ತೆಗೆದುಕೊಂಡು ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸುವರು. ಅಪರಾಹ್ನದ ವೇಳೆಯಲ್ಲಿ ಗುಂಪುಗಳಿಗೆ ಅದನ್ನು ನೀಡಿ, ಉತ್ತರ ನೀಡಲು ಒಂದು ಗಂಟೆ ಸಮಯ ನೀಡಲಾಗುವುದು. ಗುಂಪುಗಳು ಉತ್ತರಗಳನ್ನು ನೀಡುತ್ತವೆ. ಈ ಕಾರ್ಯಕ್ರಮವು ಎರಡು ಗಂಟೆಗಳ ಕಾಲ ನಡೆದು, ಅಭ್ಯಾಸಿಗಳು ಮಿಷನ್ನಿನ ಪುಸ್ತಕಗಳನ್ನು ಓದಲು ಸಹಾಯಕವಾಗಿದೆ.

## ಮುಕ್ತ ಸಭೆಗಳು

ಸೆಪ್ಟೆಂಬರ್ 12ರಂದು ಠಾಣೆಯ "ಶುಭಾರಂಭ ಟಾವರ್ಸ್" ನಲ್ಲಿಯ ಸುಮಾರು ಇಪ್ಪತ್ತು ಇಚ್ಛುಕರಿಗೆ, ದೇವರನ್ನು ಹೊರಗೆ ಮೂರ್ತಿಗಳಲ್ಲಿ ಹುಡುಕುವುದರ ಬದಲು ನಮ್ಮ ಹೃದಯದ ಆಳದಲ್ಲಿ ನೋಡಿಕೊಳ್ಳುವುದರ ಮಹತ್ವದ ಬಗ್ಗೆ, ಹಾಗು ಇದನ್ನು ಧ್ಯಾನ ಸಾಧನೆಯ ಮೂಲಕ ಹೇಗೆ ಪಡೆಯಬಹುದೆಂಬುದನ್ನು ಹೇಳಲಾಯಿತು. ಸುಮಾರು 5-6 ಸಹಭಾಗಿಗಳು ಧನಾತ್ಮಕ ಪ್ರತಿಕ್ರಿಯೆಯನ್ನು ತೋರಿಸಿದರು.







17 ನೇ ಆಗಸ್ಟದಂದು, ವಿರುಧುನಗರದ ಕಾಮರಾಜ ತಾಂತ್ರಿಕ ವಿದ್ಯಾಲಯದಲ್ಲಿ, ಒಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸುಮಾರು 150 ವಿದ್ಯಾರ್ಥಿಗಳು ಭಾಗವಹಿಸಿದರು. ಈ ಸಂದರ್ಭದಲ್ಲಿ ಸೋ ಆರ್ಮುಗಂ ಹಾಗು ಸೋ ಬಾಲಸುಬ್ರಮಣ್ಯಂರವರು ಮಾತನಾಡಿದರು. ನಂತರ ಅಭ್ಯಾಸಿಗಳು ಪ್ರಿನ್ಸಿಪಾಲರನ್ನು ಭೇಟಿಮಾಡಿದಾಗ ಅವರು ಈ ಪದ್ಧತಿಯಲ್ಲಿ ತುಂಬಾ ಆಸಕ್ತಿಯನ್ನು ತೋರಿಸಿ, ತಮ್ಮ ಕಾಲೇಜಿನಲ್ಲಿಯ ಆಸಕ್ತ ವಿದ್ಯಾರ್ಥಿಗಳ ಲಾಭಕ್ಕಾಗಿ ಆದಷ್ಟು ಬೇಗ ಧ್ಯಾನಸಾಧನೆಗಾಗಿ ಆವಶ್ಯಕ ಏರ್ಪಾಡನ್ನು ಮಾಡುವುದಾಗಿ ತಿಳಿಸಿದರು.

### ಝಾಬುವಾ

ಎಷ್ಟೋ ವರ್ಷಗಳಿಂದ ಒಂದು ಡಜನ್‌ಗಿಂತಲೂ ಕಡಿಮೆ ಇರುವ ಪುಟ್ಟ ಕೇಂದ್ರವು ಸೆಪ್ಟೆಂಬರ್ 1ರಂದು 400 ಆದಿವಾಸಿ ವಿದ್ಯಾರ್ಥಿಗಳಿಗಾಗಿ, ನಿವಾಸಿ ಶಿಕ್ಷಣ ಸಂಸ್ಥೆಯಾಗಿರುವ ಸರಕಾರಿ ಪೊಲಿಟೆಕ್ನಿಕ್ ವಿದ್ಯಾಲಯದಲ್ಲಿ ಒಂದು ಸತ್ರವನ್ನು ಆಯೋಜಿಸಿತು. ಸಹೋದರ ಪ್ರಭಾಕರರವರು, ವಿದ್ಯಾರ್ಥಿಗಳಿಗೆ, ಅಧ್ಯಾತ್ಮ ಹಾಗು ಧ್ಯಾನದ ಮಹತ್ವದ ಬಗ್ಗೆ ಉದಾಹರಣೆಗಳೊಂದಿಗೆ ವಿವರಿಸಿದರು. 98 ವಿದ್ಯಾರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿದರು. ಮುಂದಿನ ವಾರದಲ್ಲಿ ಬೇರೆ ಬೇರೆ ಕೇಂದ್ರಗಳಿಂದ ಪ್ರಶಿಕ್ಷರು ಪ್ರಾರಂಭಿಕ ಬೈಠಕಗಳನ್ನೀಯಲು ಬಂದು ತಲುಪಿದರು.

### ಹೊಸ ನೇಮಕಾತಿಗಳು

**ಸಹೋದರ ಸುರಿಂದರ ಶರ್ಮಾ**

ಜಮ್ಮು ಮತ್ತು ಕಾಶ್ಮೀರದ ವಿಭಾಗ ಪ್ರಮುಖರು.

## ಹೊಸೂರಿನ ಅಭ್ಯಾಸಿಗಳ ವಸಾಹತು

### ಯೋಜನೆ ಹಾಗು ಕಾರ್ಯಾಚರಣೆಯ ಒಳ್ಳೆಯ ಉದಾಹರಣೆ



ಅವಶ್ಯಕ ಕಟ್ಟಡಗಳು ಹಾಗು ಉತ್ತಮ ಗುಣಮಟ್ಟದ ಜೀವನಕ್ಕಾಗಿ ಬೇಕಾಗುವ ಎಲ್ಲಾ ಸೌಕರ್ಯಗಳೊಂದಿಗೆ ಶೀಘ್ರವಾಗಿ ರೂಪತಾಳುತ್ತಿರುವ ಅಭ್ಯಾಸಿಗಳ ವಸಾಹತು, ಇತರ ಅಭ್ಯಾಸಿ ವಸಾಹತುಗಳಿಗೊಂದು ಮಾದರಿಯಾಗಿದೆ. ವಿಸ್ತೃತ ಆರ್ಥಿಕ ಯೋಜನೆ, ಹಾಗು ಅಭ್ಯಾಸಿಗಳ ಒಕ್ಕೂಟದ ಕೆಲಸಗಳ ಪರಿಣಾಮವಾಗಿ, ಇದೊಂದು ಮಾದರಿ ವಸಾಹತಾಗಿ ರೂಪಗೊಂಡು, ಹೊಸೂರಿನ ಆಶ್ರಮದ ಒಂದು ಭಾಗವಾಗಿದೆ.

ಹೊಸೂರು, ತಮಿಳುನಾಡು ಸರಕಾರವು ಪ್ರೊತ್ಸಾಹಿಸಿದ ಒಂದು ಔದ್ಯೋಗಿಕ ಕೇಂದ್ರವಾಗಿದ್ದು, ಬೆಂಗಳೂರು ನಗರದ ಪೂರ್ವಕ್ಕೆ ಕೇವಲ 25 ಕಿ.ಮೀ. ದೂರದಲ್ಲಿದೆ. 1995ರಲ್ಲಿ ಹೊಸೂರು ಆಶ್ರಮಕ್ಕಾಗಿ ಜಮೀನಿನ ಹುಡುಕಾಟ ಪ್ರಾರಂಭವಾಯಿತು. ಅದರ ಫಲ 2009 ನೇ ಇಸವಿಯಲ್ಲಿ, ಹೊಸೂರು ಬಸ್ ನಿಲ್ದಾಣದಿಂದ ಸುಮಾರು ಐದು ಕಿ.ಮೀ. ದೂರದಲ್ಲಿಯ ಕೆಲವರಪಲ್ಲಿ ಆಣೆಕಟ್ಟಿನ ಎದುರಿಗೆ ಅವಲೀಪಲ್ಲಿ ಎಂಬ ಗ್ರಾಮದಲ್ಲಿ ದೊರೆಯಿತು. ಆಗಿನ ವಿಭಾಗ ಪ್ರಮುಖರಾಗಿದ್ದ ಸೋ ಸಿ. ರಾಜಗೋಪಾಲನ್‌ರವರು ಇಲ್ಲಿಗೆ ಭೇಟಿ ನೀಡಿ ಮುಂದುವರಿಯಲು ಸಮ್ಮತಿಯನ್ನಿತ್ತರು.

### ಗುರುಗಳ ದೂರದೃಷ್ಟಿ

ಕೆಲವರ್ಷಗಳ ಹಿಂದೆ ಅಭ್ಯಾಸಿಯೊಬ್ಬರು ಹೊಸೂರು ಆಶ್ರಮಕ್ಕಾಗಿ ಜಮೀನನ್ನು ದೇಣಿಗೆಯಾಗಿ ಕೊಡಬಯಸಿದಾಗ ಗುರುಗಳು ನಮ್ರತೆಯಿಂದ 'ಹೊಸೂರಿಗೆ ಎಕರೆಗಳು ಬೇಕು' ಎಂದರು. ಅವರ ಆಶೀರ್ವಾದದಿಂದ 13.8 ಎಕರೆ ಜಮೀನು ಪಡೆದುಕೊಂಡಾಗ ಅವರ ದೂರದೃಷ್ಟಿಯ ಅರಿವಾಯಿತು. ಇದರಲ್ಲಿ 4.75 ಎಕರೆ ಭೂಭಾಗವನ್ನು ಆಶ್ರಮಕ್ಕಾಗಿ ಕಾದಿರಿಸಿ, ಉಳಿದುದರಲ್ಲಿ ಅಭ್ಯಾಸಿಗಳ ವಸಾಹತನ್ನು ನಿರ್ಮಿಸಲಾಗಿದೆ. ಆಶ್ರಮ ಜಮೀನನ್ನು 22 ನೇ ಜನವರಿ 2010 ರಂದು, ಮಿಷನ್ನಿನ ಜಂಟಿ

ಕಾರ್ಯದರ್ಶಿಗಳಾದ ಸೋ ಎ.ಪಿ ದುರೈಯವರಿಂದ ನೋಂದಣಿಯನ್ನು ಮಾಡಲಾಯಿತು. ಗುರುಗಳು ಒಕ್ಕೂಟದ ಕೆಲಸದಿಂದ ಸಂತೋಷಗೊಂಡು ಈ ವಸಾಹತಿಗೆ 'ಪ್ರಗತಿ ಎನ್‌ಕ್ಲೇವ್' ಎಂದು ಹೆಸರಿಟ್ಟರು.

## ಪ್ರಮುಖ ತಂಡ

ಆರ್ಥಿಕ, ಕಟ್ಟಡ ನಿರ್ಮಾಣ ಹಾಗು ಕಾನೂನು ವ್ಯವಹಾರಗಳಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳಲು, ಏಳು ಸದಸ್ಯರ ಪ್ರಮುಖ ತಂಡವೊಂದನ್ನು ನಿರ್ಮಿಸಲಾಯಿತು. ಈ ಗುಂಪು ಇತರ ಅಭ್ಯಾಸಿಗಳೊಂದಿಗೆ ಸಂಪರ್ಕಿಸಿ ಚರ್ಚೆಯ ನಂತರ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ. ಜಮೀನಿನ ಬೆಲೆ, ಗೃಹನಿರ್ಮಾಣ ಆಶ್ರಮದ ಭೂಭಾಗಕ್ಕಾಗಿ ದೇಣಿಗೆ, ಆಶ್ರಮದ ಕಟ್ಟಡನಿರ್ಮಾಣ ಹಾಗು ದಿರ್ಘಕಾಲದ ನಿರ್ವಹಣೆಯ ಖರ್ಚುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಿವೇಶನಗಳ ಬೆಲೆಯನ್ನು ನಿರ್ಧರಿಸಲು ಒಂದು ವಿಧಾನವನ್ನು ರೂಪಿಸಲಾಗಿದೆ.

## ಕಟ್ಟಡ ನಿರ್ಮಾಣ

ಈ ರಚನೆಯಲ್ಲಿ ಸುಮಾರು 2400 ಚ.ಅಡಿಯ ಆಕಾರದ 102 ನಿವೇಶನಗಳಿವೆ. ಈಗಿನ ಉಪಲಬ್ಧ ನಿರ್ಮಾಣ ಕಾರ್ಯಗಳಲ್ಲಿ ಸುತ್ತುಗೋಡೆ, ಮಳೆನೀರಿನ ಕಾಲುವೆಗಳು, ಒಂದು ಲಕ್ಷ ಲೀಟರ್ ನೀರಿನ ಕ್ಷಮತೆಯುಳ್ಳ ಎತ್ತರದ ತೊಟ್ಟಿ, ಎರಡು ಕೊಳವೆ ಬಾವಿಗಳು, ಎಲ್ಲಾ ನಿವೇಶನಗಳಿಗೆ ನೀರಿನ ಸರಬರಾಜಿನ ಜೋಡಣೆ, ಕಾಂಕ್ರೀಟ್ ರಸ್ತೆ, ಸಾಂಸ್ಕೃತಿಕ ಕೇಂದ್ರ(ಪ್ರಸ್ತುತ ಇದನ್ನು ಧ್ಯಾನಮಂದಿರವೆಂದು ಉಪಯೋಗಿಸಲಾಗುತ್ತಿದೆ), ಮಕ್ಕಳ ಆಟದ ಮೈದಾನ ಹಾಗು ಸಾರ್ವಜನಿಕ ಉದ್ಯಾನಗಳು ಸೇರಿವೆ. ರಸ್ತೆಯ ಇಬ್ಬದಿಗೆ ಸುಮಾರು 700 ಗಿಡಗಳನ್ನು ನೆಡಲಾಗಿದ್ದು ಇವು ಆಶ್ರಮದ ಸೊಬಗನ್ನು ಹೆಚ್ಚಿಸುತ್ತವೆ. ಪ್ರತಿಯೊಂದು ನಿವೇಶನಕ್ಕೆ ವಿದ್ಯುತ್ ಪೂರೈಕೆಯ ವ್ಯವಸ್ಥೆ ಮಾಡಲಾಗಿದೆ. ಜರ್ಮನ್ ಶೆಪರ್ಡ್ ಜಾತಿಯ ನಾಯಿಯ ಮೂಲಕ 24X7 ಕಾಲ ಸುರಕ್ಷಿತತೆಯ ವ್ಯವಸ್ಥೆ ಮಾಡಲಾಗಿದೆ. ಮುಂದಿನ ಯೋಜನೆಗಳಲ್ಲಿ ಸಂಪೂರ್ಣ ಪರಿಸರದಲ್ಲಿ ಸೌರಶಕ್ತಿ ದೀಪಗಳು ಹಾಗು ಮಳೆಕೊಯ್ಲು ಪದ್ಧತಿಗಳಿವೆ.

## ಸಾಮುದಾಯಿಕ ಜೀವನ

ಈ ರಚನೆಯಲ್ಲಿ ಮೂರು ವರ್ಷದ ಅಲ್ಪಾವಧಿಯಲ್ಲಿ ಹತ್ತು ಮನೆಗಳನ್ನು ಪೂರ್ಣಗೊಳಿಸಲಾಗಿದೆ, ಹಾಗು ಇನ್ನೆರಡರ ಕಟ್ಟಡ ಕಾರ್ಯ ನಡೆದಿದ್ದು, ಇನ್ನೂ ಕೆಲವು ಬಹು ಬೇಗನೆ ಆಗಬಹುದು. ಅಭ್ಯಾಸಿಗಳು ಆಶ್ರಮದ ವಾತಾವರಣದಲ್ಲಿ ವಾಸಿಸಲು ಸಂತೋಷಪಡುತ್ತಾರೆ. ಪ್ರತಿಯೊಬ್ಬರು ಇಲ್ಲಿ ಬಂಧುಭಾವ ಮತ್ತು ತಾಳ್ಮೆಯಿಂದ ಒಂದು ದೊಡ್ಡ ಕುಟುಂಬದವರಂತೆ ಒಟ್ಟಾಗಿರಲು ಗುರುಗಳು ನೀಡಿದ ಬಹು ದೊಡ್ಡ ಸದವಕಾಶವೆಂದು ಭಾವಿಸುತ್ತಾರೆ. ನಿರ್ಮಲ ಹಾಗು



ಶಾಂತ ವಾತಾವರಣವು ಒಬ್ಬ ಆದರ್ಶ ಅಭ್ಯಾಸಿಯಾಗುವ ದೃಷ್ಟಿಯಿಂದ ಅವರಿಗೆ ತಮ್ಮ ಆತ್ಮಾವಲೋಕನ ಮಾಡಿಕೊಳ್ಳಲು, ಹಾಗು ಶುದಿಧ್ಕರಿಸಿಕೊಳ್ಳಲು ಸಹಾಯವಾಗುವುದು. ಈ ಪರಿಸರದಲ್ಲಿ ಬಂದರೆ ಮತ್ತೆ ತಿರುಗಿಹೋಗಲು ಮನಸಾಗದು ಎಂಬುದು ಎಲ್ಲರ ಅನುಭವಕ್ಕೆ ಬರುತ್ತದೆ. ಇಲ್ಲಿ ವಾಸಿಸುವ ಮಕ್ಕಳು ಆಡಲು ನೈಸರ್ಗಿಕ ಸ್ಥಳ, ಪರಸ್ಪರರಲ್ಲಿ ಒಳ್ಳೆಯ ಸಂಬಧ ಬೆಳೆಸಿಕೊಳ್ಳುವ ಅವಕಾಶ ಹಾಗು ಸಮತೋಲ ವಾತಾವರಣವನ್ನು ಪಡೆದು ಆನಂದಿಸುತ್ತಾರೆ.

ಆಶ್ರಮದ ಭೂಮಿಯಲ್ಲಿ ಋತುಮಾನಕ್ಕನುಗುಣವಾಗಿ ಬೆಳೆಯುವ ತರಕಾರಿ ಹಾಗು ದವಸ-ಧಾನ್ಯಗಳ ಉಸ್ತುವಾರಿಯನ್ನು ಅಭ್ಯಾಸಿಗಳ ಸಹಾಯದಿಂದ ನೋಡಿಕೊಳ್ಳಲಾಗುತ್ತದೆ. ವೈಯಕ್ತಿಕ ಕೈದೋಟಗಳಲ್ಲಿಯ ಉತ್ಪನ್ನಗಳನ್ನೂ ಸಹ ಹಂಚಿಕೊಳ್ಳಲಾಗುತ್ತದೆ. ಇಂತಹ ಸಾಮುದಾಯಿಕ ಜೀವನದ ಮುಖ್ಯ ಲಾಭವೆಂದರೆ, ಎಲ್ಲಾ ಅಭ್ಯಾಸಿಗಳ ಸಾಮಾನ್ಯ ಗುರಿಯಾದ ಉಚ್ಚಪ್ರತಿಯ ಬಂಧುಭಾವ, ಪರಸ್ಪರ ವಿಶ್ವಾಸ ಹಾಗು ತಾಳ್ಮೆಗಳನ್ನು ಬೆಳೆಸಿಕೊಳ್ಳುವುದಾಗಿದೆ. ಪ್ರಶಾಂತ, ಸ್ವಚ್ಛ ಉತ್ತಮ ಪರ್ಯಾವರಣವು ಇಲ್ಲಿಗೆ ಭೇಟಿ ಕೊಡುವವರನ್ನು ಸ್ವಾಗತಿಸುತ್ತದೆ.

## ಆಶ್ರಮ ಪ್ರಕಲ್ಪ

ಗುರುಗಳು ಆಶ್ರಮದ ಕಟ್ಟಡಕ್ಕೆ ಮಾನ್ಯತೆಯನ್ನಿತ್ತಿದ್ದಾರೆ. ಧ್ಯಾನ ಮಂದಿರ, ವಾಸಸ್ಥಾನ ಹಾಗು ಭೋಜನ ಹಜಾರವನ್ನೊಳಗೊಂಡ ಅಂತಿಮ ರಚನೆ ಹಾಗು ಮಂಜೂರಾತಿಯ ಕಾರ್ಯಗಳು ಮುಖ್ಯಾಲಯದಲ್ಲಿ ಪ್ರಗತಿಪಥದಲ್ಲಿವೆ. ಪ್ರಸ್ತುತ ಸತ್ಸಂಗಗಳು ಅರೆ-ಸ್ಥಿರವಾದ ಸಭಾಂಗಣದಲ್ಲಿ ನಡೆಸಲಾಗುತ್ತಿದ್ದು, ನಂತರ ಇದನ್ನು ಇತರ ಉಪಯೋಗಕ್ಕೆ ಬದಲಾಯಿಸಲಾಗುವುದು. ಅದರಂತೆ ತಾತ್ಕಾಲಿಕ ಅಡುಗೆಮನೆ ಹಾಗು ಅತಿಥಿಕೋಣೆಗಳನ್ನು ನಿರ್ಮಿಸಲಾಗಿದೆ. ಬೇರೆ ಕೇಂದ್ರ ಹಾಗು ಆಶ್ರಮಗಳಲ್ಲಿಯ ವಸಾಹತು ಸಂಯೋಜಕರು, ಇಲ್ಲಿನ ವಸಾಹತು ಹಾಗು ಆಶ್ರಮಕ್ಕೆ ಭೇಟಿನೀಡಿ ಲಾಭ ಪಡೆಯಬಹುದು.







To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2013 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.